

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 257 | Tuesday 24-06-2025 | E-mail : maruti.b.hosamani76@gmail.com | Page: 4 | Price : Rs. 1/-


## ಮಾದಿಗ ಸಮುದಾಯದ ಪರ ಗಟ್ಟಿ ಧ್ವನಿ ಮತ್ತು ಒಳ ಮೀಸಲಾತಿ ಹೋರಾಟದ ಕಾನೂನಾತ್ಮಕ ರೂವಾರಿ – ವಕೀಲರಾದ ಎಸ್. ಅರುಣಕುಮಾರ್‌ರವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು






**ಸಿಹಿ ಕಹಿ ಸುದ್ದಿ, ಕುಷ್ಟಗಿ :** ಡಾ, ಬಿ.ಆರ್ ಅಂಬೇಡ್ಕರ್ ರವರ ಸೈದ್ಧಾಂತಿಕ & ತಾತ್ವಿಕ ನೆಲೆ ಗಟ್ಟಿನ ಮೇಲೆ ಬೆಳೆದ ಮಹಾತ್ಮಾ ಪ್ರೊ, ಬಿ. ಕೃಷ್ಣಪ್ಪ ರವರ ಸ್ವಾಭಿಮಾನ, ದಿಟ್ಟತನ, ಎದೆಗಾರಿಕೆಯನ್ನು ಮೈಗೂಡಿಸಿ ಕೊಂಡು ಒಳ ಮೀಸಲಾತಿಯ ಹೋರಾಟದ ಆಳ ಹೋಳ ಅರ್ಥೈಸಿಕೊಂಡ ದಕ್ಷಿಣ ಭಾರತದಲ್ಲಿ ಸಮುದಾಯಕ್ಕೆ ಆಗುತೀರು ಅನ್ಯಾಯ, ದಘಲಭಾಜಿತನದ ವಿರುದ್ಧ ಹೆಬ್ಬಂಡೆಯಾಗಿ ಮೆಟ್ಟಿನಿಂತು ಸುಪ್ರೀಂ ಕೋರ್ಟ್ ಮೂಲಕ ನ್ಯಾಯ ಸಮ್ಮತವಾಗಿ ಹಂಚಿಕೆಯಲ್ಲಿ ನಿರ್ಣಯಿಸುವಲ್ಲಿ ಪ್ರಮುಖ ಹೆಗ್ಗುರುತಾಗಿನಿಂತ"ಎ.ನಾರಾಯಣಸ್ವಾಮಿ" ನವ ನಕ್ಷತ್ರದ ಪ್ರಜ್ವಲ್ ಪ್ರಕಾಶಮಾನವಾಗಿ ಇಡೀ ಸಮುದಾಯದ ತೆರೆ ಮರೆಯಲ್ಲಿ ನಿಂತ ಅವರ ಹಾದಿಯಾಗಿ ಸಮಾಜದ ಹಿತಕ್ಕಾಗಿ ವೈಯಕ್ತಿಕ ಹಿತಾಸಕ್ತಿ ಅಡ್ಡಿ ಬಂದರೆ ವೈಯಕ್ತಿಕ ಹಿತಾಸಕ್ತಿಯನ್ನು ಬಲಿಕೊಟ್ಟು ಸಮಾಜದ ಹಿತವನ್ನು ಕಾಪಾಡಬೇಕು ಎಂಬ ಬಾಬಾ ಸಾಹೇಬರ ಮಾತನ್ನು ಸ್ವೀಕರಿಸಿ ಸದಾ ಸಮಾಜಕ್ಕಾಗಿ ಸ್ವಾಭಿಮಾನ ಮತ್ತು ಆತ್ಮ ಗೌರವವನ್ನು ತುಂಬುತ್ತಾ 35 ವರ್ಷದ ಒಳ ಮೀಸಲಾತಿ ಚಳುವಳಿಯನ್ನು ಯಾರು ಏನೇ ಅಂದರೂ ಜೈ ಮಾದಿಗ ಜೈ ಜೈ ಮಾದಿಗ ಎನ್ನುತ್ತಾ ಅತ್ಯಂತ ನಿಷ್ಠೂರ ಹೋರಾಟದ ಮಾತುಗಳಲ್ಲಿ ಶಾಸಕರು, ಸಚಿವರು, ವಿರೋಧ ಪಕ್ಷದ ನಾಯಕರು, ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ಮುಂದೆ ಒಳ ಮೀಸಲಾತಿಯ ಹಕ್ಕನ್ನು ಕಾನೂನಾತ್ಮಕವಾಗಿ ವಿವರಿಸಿ ಅವರ ಕಂಚಿನ ಕಂಠದಲ್ಲಿ ಮಂಡನೆ ಮಾಡುತ್ತಿದ್ದರೆ ಮಂತ್ರ ಮಗ್ನರಾಗಿರುವ ಸಂಗತಿಗಳು ಕಣ್ಣು ಮುಂದಿದೆ ನಮ್ಮ ಹೋರಾಟಗಾರರಲ್ಲೂ ಆತ್ಮ ವಿಶ್ವಾಸವನ್ನು ತುಂಬುತ್ತಾ ಒಳ ಮೀಸಲಾತಿಯನ್ನು ನಾವು ಏನೇ ಕಷ್ಟ ಬಂದರೂ ಹೋರಾಟದ ಮೂಲಕ ಸಮಾಜಕ್ಕೆ ದಕ್ಕಿಸ ಬೇಕೆಂಬ ದಿಟ್ಟ ನಿಲುವಿನೊಂದಿಗೆ ಕರ್ನಾಟಕ ರಾಜ್ಯವನ್ನು ಸುತ್ತಿ ವಕೀಲರು ಹಾಗೂ ಸಮಾಜವನ್ನು ಸಂಘಟಿಸಿ ಹೋರಾಟದ ಕಾವಿನ ನಿರಂತರತೆಯನ್ನು ಕಾಪಾಡಿ ಕೊಂಡು ಒಳ ಮೀಸಲಾತಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷರು ಹಾಗೂ ಹಿರಿಯ ವಕೀಲರಾದ ಎಸ್. ಅರುಣ್ ಕುಮಾರ್ ಅವರಿಗೆ ಸಮಾಜದ ಸಮಸ್ತ ವಕೀಲರು ಹಾಗೂ ಸಮಾಜದ ಆಶೀರ್ವಾದ ಗಳೊಂದಿಗೆ ಹುಟ್ಟು ಹಬ್ಬದ ಶುಭಾಶಯಗಳು ತಿಳಿಸುತ್ತಾ ಅವರಿಗೆ ಬುದ್ಧ ಬಸವ ಅಂಬೇಡ್ಕರ್ ಕಾನ್ಸಿ ರಾಮ್ ಮತ್ತು ಪ್ರೊ, ಬಿ.ಕೆ ರವರ ಆಯುರಾ ರೋಗ್ಯ ಕರುಣಿಸಲಿ ಎಂದು ಆಶಿಸುತ್ತೇವೆ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಬೆಂಗಳೂರು ರವರಿಗೆ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ದ ಪರವಾಗಿ ಚಲನಶೀಲತೆಯ ವೇಗ ಹೆಚ್ಚಿಸಿರಿ ಅಂತಾ ಅಖಂಡ ದಕ್ಷಿಣ ಭಾರತದ ಮಾದಿಗ ಪರವಾಗಿ & ಸುದ್ದಿ ವಾಹಿನಿ ಪರವಾಗಿ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.

**ವರದಿ:ವಕೀಲರು ಶಿವುಕುಮಾರ.**
**ದೊಡ್ಡಮನಿ ಕುಷ್ಟಗಿ**

## ಶಿಸ್ತು, ತಾಳ್ಮೆ, ಮೈಗೂಡಿಸಿ ಕೊಳ್ಳಲು ಯೋಗ ಸಹಕಾರಿ, ವೈಭವ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಅಧ್ಯಕ್ಷರಾದ ಮುರಳಿದರ ಗಜೇಂದ್ರಗಡ



**ಸಿಹಿ ಕಹಿ ಸುದ್ದಿ,**
**ಕೆ.ಹೊಸಹಳ್ಳಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೊಸಹಳ್ಳಿ ಹೋಬಳಿಯ ಹೊಸಳ್ಳಿಯ ವೈಭವ ಆಂಗ್ಲ ಮಾಧ್ಯಮ ಶಾಲೆಯ ಆವರಣದಲ್ಲಿ ಯೋಗ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಮುರಳಿದರ ಗಜೇಂದ್ರಗಡ ಮಾತನಾಡಿ ಪ್ರತಿದಿನ ಯೋಗ ಮಾಡುವುದನ್ನು ಅಭ್ಯಾಸ ಮಾಡಿದಲ್ಲಿ ಜ್ಞಾನವನ್ನು ವೃದ್ಧಿಸಿ ಕೊಳ್ಳುವ ಜೊತೆಗೆ ಶಿಸ್ತು ಸಂಯಮ ಹಾಗೂ ತಾಳ್ಮೆಯನ್ನು ಮೈಗೂಡಿಸಿ ಕೊಂಡು ದೇಹದ ಅಂಗಾಂಗಗಳನ್ನು ಸುಸ್ಥಿತಿಯಲ್ಲಿಟ್ಟು ಕೊಳ್ಳಬಹುದು ಎಂದು ತಿಳಿಸಿದರು.

ಪ್ರತಿಯೊಬ್ಬರುನಿತ್ಯಕನಿಷ್ಠಒಂದುಗಂಟೆಯೋಗಾಭ್ಯಾಸ ಮಾಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗಿ ಆರೋಗ್ಯವಂತ ಜೀವನ ನಡೆಸಬಹುದು. ಮನುಷ್ಯನ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಯೋಗಾಭ್ಯಾಸವನ್ನು ಕೇವಲ ಒಂದು ದಿನಕ್ಕೆ ಸೀಮಿತ ಗೊಳಿಸದೆ ಪ್ರತಿನಿತ್ಯ ಕನಿಷ್ಠ ಒಂದು ಗಂಟೆ ಅಭ್ಯಾಸ ಮಾಡುವುದನ್ನು ರೂಢಿ ಮಾಡಿ ಕೊಳ್ಳಬೇಕು ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಸವಿತಾ ಗಜೇಂದ್ರಗಡ, ಹೊಸಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಕೆ.ಜಿ ಸಿದ್ದನಗೌಡ,



ಸಿ.ಆರ್.ಪಿ ಸಿದ್ದೇಶ್ವರ, ಪಿಯು ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜಾತಪ್ಪ, ಶಾಲೆಯ ಮುಖ್ಯೋಪಾಧ್ಯಾಯರಾದ ಪ್ರಕಾಶ್ ಗೌಡ, ವೈಭವ, ಪೂಜಾರ್ ಕಲ್ಲೇಶ್, ಕಂಪಳೇಶ್, ಯೋಗ ಶಿಕ್ಷಕರು ಸೇರಿದಂತೆ ದೃತಿ ವಿದ್ಯಾ ಸಂಸ್ಥೆ, ವೈಭವ ಆಂಗ್ಲ ಮಾಧ್ಯಮ ಶಾಲೆ, ಕಾಳಿದಾಸ ಕಿರಿಯ ಪ್ರಾಥಮಿಕ ಶಾಲೆ, ಇಂದು ಪದವಿ ಪೂರ್ವ ಕಾಲೇಜು ಹೊಸಹಳ್ಳಿ ಮುಖ್ಯಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗ ಹಾಗೂ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇತರರು ಸಾರ್ವಜನಿಕರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್.ಕೆ.ಹೊಸಹಳ್ಳಿ**

## ಹಂಡೆ ಹನುಮಪ್ಪ ನಾಯಕರ ಜೀವನ ಚರಿತ್ರೆ ಪಠ್ಯದಲ್ಲಿ ಅಳವಡಿಸುವಂತೆ–ಡಾ. ಎಸ್.ಎಸ್. ಪಾಟೀಲ್ ಸರ್ಕಾರಕ್ಕೆ ಆಗ್ರಹ





**ಸಿಹಿ ಕಹಿ ಸುದ್ದಿ,**
**ಮುದ್ದೇಬಿಹಾಳ:**ಹಂಡೆಹನುಮಪ್ಪ ನಾಯಕರ ಇತಿಹಾಸ ಈಗಾಗಲೇ ಆಂಧ್ರಪ್ರದೇಶದ ಸರ್ಕಾರ ತನ್ನ ಶಾಲೆಗಳಲ್ಲಿನ ಪಠ್ಯ ಪುಸ್ತಕದಲ್ಲಿ ಅಳವಡಿಸಿದೆ. ಕರ್ನಾಟಕ ಸರ್ಕಾರವು ಹಂಡೆ ಅರಸರ ಜೀವನ ಸಾಧನೆಯನ್ನು ತಿಳಿಸಲು ಪಠ್ಯದಲ್ಲಿ ಅವರ ಇತಿಹಾಸದ ಪಾಠ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸಮಾಜದಿಂದ ಹೋರಾಟ

ನಡೆಸಲಾಗುವುದು. ಎಂದು ಅಖಿಲ ಕರ್ನಾಟಕ ವೀರಶೈವ ಲಿಂಗಾಯತ ಹಂಡೆ ವಜೀರ್ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಡಾ, ಎಸ್. ಎಸ್ ಪಾಟೀಲ್ ಹೇಳಿದರು. ಪಟ್ಟಣದ ಆಲಮಟ್ಟಿರಸ್ತೆಯಲ್ಲಿರುವಬಿ.ಎಲ್ ಬಿರಾದಾರ್. ಮಂಗಲ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವೀರಶೈವ ಲಿಂಗಾಯತ ಹಂಡೆ ವಜೀರ್ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಘಟಕದಿಂದ ಏರ್ಪಡಿಸಿದ್ದ ಕೂಡಲ ಸಂಗಮದಲ್ಲಿ ಜರುಗಿದ ರಾಜ್ಯಮಟ್ಟದ ಸಮಾವೇಶದ ಯಶಸ್ವಿಗೆ ಶ್ರಮಿಸಿದವರಿಗೆ ಅಭಿನಂದಿಸುವಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕರ್ನಾಟಕ ವೀರಶೈವ ಲಿಂಗಾಯತ ಹಂಡೆ ವಜೀರ್ ಹೇಮಾಭಿವೃದ್ಧಿ ಸಂಘದ ರಾಜ್ಯ ಉಪಾಧ್ಯಕ್ಷ ಶಂಕರಗೌಡ ರಾಯಗೊಂಡ ಮಾತನಾಡಿ. ಕೂಡಲ ಸಂಗಮದಲ್ಲಿ ಫೆಬ್ರುವರಿ 2 ರಂದು ನಡೆದ ಸಮಾಜದ ರಾಜ್ಯಮಟ್ಟದ ಸಮಾವೇಶ ಯಶಸ್ವಿಗೆ ತಾಲೂಕಿನಿಂದ ಸಮಾಜದ ಬಾಂಧವರು 12 ಲಕ್ಷ ರೂಪಾಯಿಗಳ ವರೆಗೆ ಉದಾರವಾದ ದೇಣಿಗೆ ನೀಡಿ ಸಹಕಾರ ಮಾಡಿದ್ದಾರೆ ಎಂದು ತಿಳಿಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಎಂ ಬೆಳಗಲ್. ಮಾತನಾಡಿ. ಸಮಾಜದಲ್ಲಿರುವ ಬಡ ಮಕ್ಕಳ ಶಿಕ್ಷಣದ ವೆಚ್ಚಕ್ಕಾಗಿ ಸಮಾಜದ ಬಾಂಧವರು ಉಳಿತಾಯ ಮಾಡಿ ಅದನ್ನು ನೀಡಿ ಸಮಾಜದ ಮುಖ್ಯ ವಾಹಿನಿಗೆ ತರುವ ಕೆಲಸ ಆಗಬೇಕು ಎಂದರು. ಸಮಾಜದ ರಾಜ್ಯ ಉಪಾಧ್ಯಕ್ಷ ರಾಜಶೇಖರ್ ಮ್ಯಾಗೇರಿ ಸಮಾಜದ ತಾಲೂಕು ಅಧ್ಯಕ್ಷ ವಕೀಲರಾದ ಎಂ.ಬಿ ಬಿರಾದಾರ್. ವಕೀಲರಾದ ಆರ್. ಎಸ್ ಪಾಟೀಲ್ ಸಮಾಜದ ಜಿಲ್ಲಾಧ್ಯಕ್ಷ ಸಂಗನಗೌಡ ಕರಬಂಟನಾಳ. ಎಸ್. ಎಸ್ ಭೂತಲ್. ಮಾತನಾಡಿದರು. ಯುವ ಘಟಕದ ರಾಜ್ಯಾಧ್ಯಕ್ಷ ಸಂಗನಗೌಡ ಯಂಕಂಚಿ. ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭು ಬೆಳ್ಳಿ. ಗೌರವಾಧ್ಯಕ್ಷ ಕೆ.ಎನ್ ಗೌಡರ್. ಯುವ ಘಟಕದ ಜಿಲ್ಲಾಧ್ಯಕ್ಷ ನಾಗರಾಜ್ ತಂಗಡಿಗಿ. ಮುಖಂಡರಾದ ಬಿ. ಎಲ್ ಬಿರಾದಾರ್. ಮಾಜಿ ತಾಲೂಕಾ ಪಂಚಾಯತಿ ಉಪಾಧ್ಯಕ್ಷ ಮಂಜುನಾಥ್ ಗೌಡ ಪಾಟೀಲ್. ಎಸ್.ಬಿ ಹಂಡ್ರಗಲ್. ಹೇಮಾ ಭಿರಾದಾರ್. ಸಂಗಮೇಶ್ ಶಿವನಗಿ ಇದ್ದರು.

ಕಾರ್ಯಕ್ರಮದಲ್ಲಿ ಆಲ ಕೊಪರದ ವಿದ್ಯಾರ್ಥಿನಿ ಗೀತಾ ಬಿರಾದಾರ್ ಎಸ್.ಎಸ್.ಎಲ್.ಸಿ ಯಲ್ಲಿ ಶೇ. 96 ರಷ್ಟುಅಂಕ ಪಡೆದು ಕೊಂಡ ಹಿನ್ನೆಲೆಯಲ್ಲಿ

ಆಕೆಗೆ ಸಮಾಜದ ಬಾಂಧವರು ಶೈಕ್ಷಣಿಕ ವೆಚ್ಚಕ್ಕೆಂದು ?16 ಸಾವಿರ ಆರ್ಥಿಕ ನೆರವು ನೀಡಿದರು. ಇದೇ ವೇಳೆಯಲ್ಲಿ ಸಮಾಜದ ಗುರು ಹಿರಿಯರು ಎಲ್ಲರೂ ಉಪಸಿತರಿದ್ದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್ ಕನ್ನಡ**
**ಚಾನಲ್:ಬಸವರಾಜ. ಸಂಕನಾಳ.**
**ಮುದ್ದೇಬಿಹಾಳ**

## ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜನ್ಮದಿನದ ಅಂಗವಾಗಿ ಶಾಲೆಯ ಮಕ್ಕಳಿಗೆ ಪುಸ್ತಕ ವಿತರಣೆ



**ವಿಜಯನಗರ :** ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಕಾಂಗ್ರೆಸ್ ಪಕ್ಷದ ಅಧಿನಾಯಕರು, ಲೋಕಸಭೆಯ ವಿರೋಧ ಪಕ್ಷದ ನಾಯಕರಾದ "ರಾಹುಲ್ ಗಾಂಧಿ" ಅವರಹುಟ್ಟುಹಬ್ಬದಅಂಗವಾಗಿಇಂದುವಿಜಯನಗರ ಜಿಲ್ಲಾ ಹೊಸಪೇಟೆಯ 28ನೇ ವಾರ್ಡಿನ ಕೆಜಿಸ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ" ಶುಕ್ರವಾರ ವಿದ್ಯಾರ್ಥಿಗಳಿಗೆ "ನೋಟ್ ಬುಕ್" ಕೊಡುವುದರ ಮುಖಾಂತರ ಹುಟ್ಟು ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷರಾದ ಇಮ್ತಿಯಾಜ್ ವಿಜಯನಗರ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅರಬಜ್ ಖಾನ್, ಅಲ್ತಾಫ್ ಶೇಕ್ ಹೊಸಪೇಟೆ ಯುವ



ಕಾಂಗ್ರೆಸ್ ವಿಧಾನಸಭಾಧ್ಯಕ್ಷರಾದ ಹಾರುನ್ ಶೇಕ್ ಬ್ಲಾಕ್ ಅಧ್ಯಕ್ಷರಾದ ಪ್ರದೀಪ್ ಕುಮಾರ್ ಕಮಲಾಪುರ ಬ್ಲಾಕ್ ಅಧ್ಯಕ್ಷರು ಗೌಸ್ ಸಾಬ್ ಕಾರ್ಯದರ್ಶಿಗಳು ಹಾಗೂ ಯುವ ಕಾಂಗ್ರೆಸ್ ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮುತ್ತೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಗ ದಿನ ಆಚರಣೆ



**ಜಮಖಂಡಿ :** ತಾಲೂಕಿನ ಮುತ್ತೂರ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಪ್ರೌಡ ಶಾಲೆಯಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಶಿಕ್ಷಕ ಶಿವಾನಂದ್ ಕಲ್ಯಾಣಿ ಮಾತನಾಡಿ ಈ ಯೋಗವನ್ನು ಸುಮಾರು 175 ದೇಶಗಳು ಒಪ್ಪಿಕೊಂಡು ಇಂದು ದೇಶಾದ್ಯಂತ ಯೋಗವನ್ನು ಯೋಗದಿಂದ ರೋಗ ದೂರವಿರಲು ಎಲ್ಲ ಜನರು ಇದನ್ನು ಸ್ವೀಕಾರ ಮಾಡಿಕೊಂಡಿದ್ದಾರೆ. ಯೋಗವನ್ನು ಮಾಡುವುದರಿಂದ ಯಾವುದೇ ರೋಗ ಇದ್ದರೂ ನಮ್ಮಿಂದ ಅದು ದೂರವಾಗುವುದು ಶತಸಿದ್ಧ ಎನ್ನುವ ಭಾವನೆಯನ್ನು ಎಲ್ಲರೂ ಇದೆ ಎಂದು ತಿಳಿಸಿದರು

ಈ ಯೋಗ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಂಬಿ ಜಂಡೆ, ಸಹ ಶಿಕ್ಷಕ ಎಸ್ ಬಿ ಜಮಖಂಡಿ ಪ್ರೌಢಶಾಲೆಯ ಸಹ ಶಿಕ್ಷಕ ದ್ರಾಕ್ಷಿಯ , ನಾಗರಾಳ ಶಿಕ್ಷಕಿ ಪತಂಗಿ ಕಠವಾಣಿ ,ಸಿದ್ಧಾರ್ಥ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಇನ್ನು ಅನೇಕರು ಪಾಲ್ಗೊಂಡಿದರು.

## ಬಿ.ವಿ.ಆರ್ ಶಾಲೆಯ ವಿದ್ಯಾರ್ಥಿ ಕುರುಮೇಶ ನಾಯಕ–ಕಾಣೆ ಪೋಷಕರ ಆರೋಪ

**ಸಿಹಿ ಕಹಿ ಸುದ್ದಿ, ಮಾನ್ವಿ :** ಖಾಸಗಿ ಶಾಲೆಗಳು ಫೀ ಕಟ್ಟಿಲ್ಲವೆಂಬ ನೆಪದಲ್ಲಿವಿದ್ಯಾರ್ಥಿಗಳನ್ನುಮನೆಗೆಕಳಿಸಬಾರದುಹೊರಗಡೆ ನಿಲ್ಲಿಸ ಬಾರದು ಎಂದು ಸರಕಾರದ ಸುತ್ತೋಲೆ ಇದೆ. ಆದರೆ ಸರಕಾರದ ನಿಯಮಗಳನ್ನು ಗಾಳಿಗೆ ತೂರಿ ಮಾನ್ವಿ ಪಟ್ಟಣದ ಬಿ.ವಿ.ಆರ್ ಶಾಲೆಯ ಸಂಸ್ಥಾಪಕ ಬಿ.ವಿ ರಡ್ಡಿ ಸಾಹೇಬ್ರು ಫೀ ಕಟ್ಟಿಲ್ಲವೆಂದು 9 ನೇ. ತರಗತಿ ವಿದ್ಯಾರ್ಥಿ ಕುರುಮೇಶನನ್ನು ಶಾಲೆಗೆ ಕರೆದು ಕೊಳ್ಳದೆ ವಾಪಸ್ ಕಳಿಸಿದ್ದರಿಂದ ಬಾಲಕ ಕುರುಮೇಶ ಮನೆಗೆ ಬಂದಿಲ್ಲವೆಂದು ಪೋಷಕರು ಆರೋಪ ಮಾಡಿರುವುದು ಬೆಳಕಿಗೆ ಬಂದಿದೆ.

ಶಾಲೆಗೆ ಬಂದ ಕುರುಮೇಶನನ್ನು ತರಗತಿಗೆ ಕೂರಿಸಿ ಪೋಷಕರಿಗೆ ಮಾಹಿತಿ ನೀಡಿ ಫೀ ಕಟ್ಟಿದ ನಂತರ ಕಳಿಸಿ ಎಂದು ಹೇಳಬಹುದು. ಆದರೆ ಏಕಾಏಕಿಯಾಗಿ ಬಿ.ವಿ.ಆರ್ ಶಾಲೆಯ ಸಂಸ್ಥಾಪಕ ರಡ್ಡಿ ಅವರು ವಿದ್ಯಾರ್ಥಿ ಕುರುಮೇಶನನ್ನು ವಾಪಸ್ ಕಳಿಸಿದ್ದರಿಂದ ಬಾಲಕ ಮನೆಗೆ



ಬಂದಿಲ್ಲ ಏನಾದರು ಅನಾಹುತವಾದರೆ ಬಿ.ವಿ ಆರ್ ಶಾಲೆಯವರೆ ಕಾರಣ ಎಂದು ಪೋಷಕ ನರಸಿಂಹನಾಯಕ ಮಾನ್ವಿ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಮಾನ್ವಿ ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ದೊಡ್ಡಮನಿ ಸಾಹೇಬ್ರೆ ಫೀ ಕಟ್ಟಿಲ್ಲವೆಂದು ಕುರುಮೇಶ ಎಂಬ 9 ನೇ. ತರಗತಿ ವಿದ್ಯಾರ್ಥಿಯನ್ನು ವಾಪಸ್ ಕಳಿಸಿದ್ದರಿಂದ ವಾಪಸ್ ಕಳಿಸುತ್ತಾರೆಂದರೆ ಮಾನ್ವಿಯಲ್ಲಿ ಸರಕಾರದ ಕಾನೂನು ಇದೇನಾ ಅಥವಾ ಇಲ್ಲವಾ ಬಿ.ವಿ.ಆರ್ ಶಾಲೆಯ ದುರಾಡಳಿತ ಇಷ್ಟೊಂದು ಇದೆ ಅಂದರೆ ಏನಿದರ ಅರ್ಥ, ನನ್ನ ಮಗನಿಗೆ ಅನಾಹುತವಾದರೆ ಇದಕ್ಕೆ ಬಿ.ವಿ.ಆರ್ ಶಾಲೆಯ ಬಿ.ವಿ ರಡ್ಡಿ ಕಾರಣ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ನಿಗದಿಪಡಿಸಿದ ಸಮಯದಲ್ಲಿ ಅಂಜನಾದ್ರಿ ದೇವಸ್ಥಾನದ ಕೆಲಸಗಳು ಮುಗಿಯಬೇಕು: ಸಚಿವ ಎಚ್.ಕೆ. ಪಾಟೀಲ್

**ಕೊಪ್ಪಳ :** ನಿಗದಿಪಡಿಸಿದ ಸಮಯದಲ್ಲಿ ಅಂಜನಾದ್ರಿ ದೇವಸ್ಥಾನದ ಕೆಲಸ ಹಾಗೂ ಕಾಮಗಾರಿಗಳು ಮುಗಿಯಬೇಕು. ಯಾವುದೇಕಾರಣಕ್ಕೆವಿಳಂಬವಾಗಬಾರದು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್. ಕೆ. ಪಾಟೀಲ್ ಹೇಳಿದರು.



ಅವರು ಸೋಮವಾರ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಜಿಲ್ಲಾಡಳಿತ ಕೊಪ್ಪಳ ಇವರ ಸಹಯೋಗದಲ್ಲಿ ಅಂಜನಾದ್ರಿ ಬೆಟ್ಟದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂಜನಾದ್ರಿ ಮತ್ತು ಕೊಪ್ಪಳ ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗಿನ ಸಭೆಯಲ್ಲಿಅಧ್ಯಕ್ಷತೆವಹಿಸಿಮಾತನಾಡಿದರು.

ಅಂಜನಾದ್ರಿ ದೇವಸ್ಥಾನದ ವಸತಿ ಸಮುಚ್ಚಯದಕೆಲಸಈವರ್ಷದಡಿಸೆಂಬರ್ ತಿಂಗಳಲ್ಲಿ ಪೂರ್ಣಗೊಳಿಸಬೇಕು. ಶೌಚಾಲಯ ಮತ್ತು ಬಾತ್‌ರೂಂಗಳನ್ನು ಸೌದತ್ತಿ ಯಲ್ಲಮ್ಮನ ಗುಡ್ಡದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಮಾಡಿದ್ದಾರೆ. ಅದನ್ನು ಒಂದು ಸಲ ನೋಡಿಕೊಂಡು ಬಂದು ಅದೇ ತರಹ ಇಲ್ಲಿಯೂ ಮಾಡಿ. ಬ್ಯಾಗ್ ಇಡಲು ಕ್ಲಾಕ್ ರೂಮ್ ಸಹ ಮಾಡಿದ್ದಾರೆ. ಅಂಜನಾದ್ರಿ ಬೆಟ್ಟಕ್ಕೆ ರೋಪ್‌ವೇ, ಕೇಬಲ್ ಕಾರ್ ಮಾಡುವುದರಿಂದ ಇಲ್ಲಿಗೆ ಭೇಟಿ ನೀಡುವ ಜನರಿಗೆ ಅನುಕೂಲವಾಗಲಿದೆ. ಎಸ್ಕಲೇಟರ್ ಮಾಡುವ ಸಲುವಾಗಿ ಒಂದು ವಾರದ ಒಳಗಾಗಿ ಸಮೀಕ್ಷೆ ಎಷ್ಟಿಮೇಟ್ ಅನ್ನು ಮಾಡಲಾಗುತ್ತಿದೆ ಎಂದರು.

ಸುಮಾರು 15 ವರ್ಷಗಳಿಂದ ಅಂಜನಾದ್ರಿ ಅಭಿವೃದ್ಧಿ ಕುರಿತು ಚರ್ಚೆಗಳು ನಡೆಯುತ್ತಿದ್ದವು. ಈ ಭಾಗದ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಆಂಜನೇಯ ಸ್ವಾಮಿ ಭಕ್ತರು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದರಿಂದ 2024– 25 ನೇ ಸಾಲಿನಲ್ಲಿ ನೂರು ಕೋಟಿ ರೂ. ಅನುದಾನ ನೀಡಿದ್ದು, ಇದರ ಕ್ರಿಯಾ ಯೋಜನೆ ತಯಾರಿಸಿ 600 ಕೊಠಡಿಗಳ ಪ್ರವಾಸಿ ಮಂದಿರ, ಸಮುದಾಯ ಭವನ, ನಿಲುಗಡೆ ಸ್ಥಳ, ಪ್ರದಕ್ಷಣಾ ಪಥ, ಸ್ನಾನ ಘಟ್ಟ, ವಿಐಪಿ ಅತಿಥಿ ಗೃಹ, ಸೇ–ರಿದಂತೆ ಇತರೆ ಕೆಲಸಗಳ ಪ್ರಾಸ್ತಾವಿತ ಯೋಜನೆಗಳನ್ನು ರೂಪಿಸಲಾಗಿದೆ. ಇವುಗಳನ್ನು ನಿಗದಿಪಡಿಸಿದ ಸಮಯದಲ್ಲಿ ಮುಗಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಹೇಳಿದರು.

ಹಿಂದುಳಿದವರ್ಗಗಳಕಲ್ಯಾಣಹಾಗೂಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್. ತಂಗಡಗಿ ಅವರು ಮಾತನಾಡಿ, ಹನುಮ ಮಾಲೆ ಕಾರ್ಯಕ್ರಮಕ್ಕೆ ಲಕ್ಷಾಂತರ ಜನರು ಅಂಜನಾದ್ರಿಗೆ ಬರುತ್ತಾರೆ. ಹಾಗಾಗಿ ಮಾರ್ಗ ಮಧ್ಯದ ಅಲ್ಲಲ್ಲಿ ಸ್ನಾನಗೃಹ ಹಾಗೂ ಶೌಚಾಲಯಗಳನ್ನು ನಿರ್ಮಿಸಬೇಕು. ಆನೆಗುಂದಿ ಹಾಗೂ ಕಡೆ ಬಾಗಿಲಿನಿಂದ ಇವುಗಳನ್ನು ಮಾಡಬೇಕು. ವಿಶೇಷವಾಗಿ ಅಂಜನಾದ್ರಿಗೆ ಭಕ್ತರು ಡಿಸೆಂಬರ್ ಮತ್ತು ಹನುಮ ಜಯಂತಿ ಸಂದರ್ಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ ಎಂದು ಹೇಳಿದರು.

ಸಭೆಗೂ ಮುಂಚೆ ಸಚಿವರು ಅಂಜನಾದ್ರಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ವೀಕ್ಷಿಸಿದ ನಂತರ ಅಂಜನಾದ್ರಿ ದೇವಸ್ಥಾನದ ಪಾದಗಟ್ಟೆಯಲ್ಲಿ ಪೂಜೆ ಸಲ್ಲಿಸಿದರು. ಸಭೆಯ ನಂತರ ಕೊಪ್ಪಳ ಜಿಲ್ಲೆಯ ಪ್ರವಾಸಿ ತಾಣಗಳ ಕುರಿತ ಬ್ರ್ಯಾಂಡ್ ಕೊಪ್ಪಳ ವೆಬ್‌ಸೈಟ್ ಉದ್ಘಾಟಿಸಿದರು.

ಈ ಸಭೆಯಲ್ಲಿ ಕೊಪ್ಪಳ ಸಂಸದರಾದ ರಾಜಶೇಖರ ಬಸವರಾಜ ಹಿಟ್ನಾಳ, ಪ್ರವಾಸೋದ್ಯಮಇಲಾಖೆಯಕಾರ್ಯದರ್ಶಿ ಸಲ್ಮಾ ಫಾಯಿಮಾ, ಆಯುಕ್ತರಾದ ರಾಜೇಂದ್ರ ಕೆ.ವಿ., ರಾಜವಂಶಸ್ಥರಾದ ಲಲಿತಾ ರಾಣಿ, ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯಾ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ರೆಡ್ಡಿ ಶ್ರೀನಿವಾಸ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರಾದ ನಾಗರಾಜ, ಆನೆಗುಂದಿಗ್ರಾಮಪಂಚಾಯತಿಅಧ್ಯಕ್ಷರಾದ ಹುಲಿಗೆಮ್ಮ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮ: ಸಮನ್ವಯ ಸಮಿತಿ ಸಭೆ

# ಅಧಿಕಾರಿಗಳು ಸಮನ್ವಯತೆ ಸಾಧಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ: ನಲಿನ್ ಅತುಲ್



**ಕೊಪ್ಪಳ:** ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಆರೋಗ್ಯ ಇಲಾಖೆಯ ಅಧಿಕಾರಿಗಳ ಜೊತೆ ಸಮನ್ವಯತೆ ಸಾಧಿಸಿ 5 ವರ್ಷದೊಳಗಿನ ಮಕ್ಕಳಲ್ಲಿ ಕಂಡು ಬರುವ ಅತಿಸಾರ ಭೇದಿ ನಿಯಂತ್ರಣ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಸಹಕರಿಸುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಸೂಚಿಸಿದರು.

ಜೂನ್ 13 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಅತಿಸಾರ ಭೇದಿ ನಿಯಂತ್ರಣಕಾರ್ಯಕ್ರಮದಕುರಿತಸಮನ್ವಯಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಆರೋಗ್ಯ ಇಲಾಖೆಯ ಎಲ್ಲಾ ತಾಲೂಕಾ ಆಸ್ಪತ್ರೆಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಆರ್‌ಎಸ್ ಕಾರ್ನರ್ ಪ್ರಾರಂಭಿಸಿ ಚಿಕಿತ್ಸೆ ನೀಡಬೇಕು ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಮಕ್ಕಳಿರುವ ಮನೆಗಳಿಗೆ ಒಆರ್‌ಎಸ್ ಪ್ಯಾಕೆಟ್ ಮತ್ತು ಝಿಂಕ್ ಮಾತ್ರೆಯನ್ನು ವಿತರಣೆ ಮಾಡಬೇಕು. ಅಂಗನವಾಡಿ ಕೇಂದ್ರ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ಅತಿಸಾರ ಭೇದಿ ಉಂಟಾಗದಂತೆ ಕೈತೊಳೆಯುವ ವಿಧಾನಗಳ ಬಗ್ಗೆ ಹಾಗೂ ವೈಯಕ್ತಿಕ ಸ್ವಚ್ಛತೆ ಬಗ್ಗೆ ಆರೋಗ್ಯ ಶಿಕ್ಷಣ ನೀಡಬೇಕು. ಅತಿಸಾರ ಭೇದಿ ನಿಯಂತ್ರಿಸಲು ವಿವಿಧ ಇಲಾಖೆಗಳಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕರಿಗೆ ಇದರ ಬಗ್ಗೆ ಮಾಹಿತಿ ನೀಡುವಂತೆ ಹಾಗೂ ಮಕ್ಕಳಿಗೆ ಕೈತೊಳೆಯುವ ವಿಧಾನಗಳ ಬಗ್ಗೆ ಅರಿವು ಮೂಡಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು.

ಅದೇ ರೀತಿ ಶಿಕ್ಷಣ ಇಲಾಖೆಯಿಂದ ಎಲ್ಲಾ ಶಾಲೆಗಳಲ್ಲಿ ಪ್ರಾರ್ಥನಾ ಸಮಯದಲ್ಲಿ ಕೈತೊಳೆಯುವ ವಿಧಾನಗಳ ಬಗ್ಗೆ ಘೋಷಣೆ ಕೂಗುವಂತೆ ಕ್ರಮ ಕೈಗೊಳ್ಳಬೇಕು. ಪಂಚಾಯತ್ ರಾಜ್ ಇಲಾಖೆಯಿಂದ ಗ್ರಾಮದ ಎಲ್ಲಾ ಕುಡಿಯುವ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛವಾಗಿ ತೊಳೆದು ಶುದ್ಧೀಕರಣ ಮಾಡಿಸಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಈ ಕಾರ್ಯಕ್ರಮದ ಬಗ್ಗೆ ಹೆಚ್ಚು ಹೆಚ್ಚು ಪ್ರಚಾರ ಮಾಡಿಸಬೇಕು ಎಂದು ತಿಳಿಸಿದ ಅವರು, ಈ ರೀತಿಯಾಗಿ ವಿವಿಧ ಇಲಾಖೆಗಳು ಸಮನ್ವಯ ಸಾಧಿಸಿ 0–5 ವರ್ಷದ ಮಕ್ಕಳಿಗೆ ಅತಿಸಾರ ಭೇದಿ ಉಂಟಾಗದಂತೆ ಕ್ರಮವಹಿಸಲು ಸೂಚಿಸಿದರು.

ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಎಲ್ಲ ಇಲಾಖೆಗಳು ಪರಸ್ಪರ ಸಹಕಾರದೊಂದಿಗೆ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸೂಚಿಸಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ॥ ಪ್ರಕಾಶ ವಿ. ಇವರು ಮಾತನಾಡಿ, ಅತಿಸಾರ ಭೇದಿಯಿಂದ 5 ವರ್ಷದೊಳಗಿನ ಮಕ್ಕಳ ಮರಣವನ್ನು ನಿಯಂತ್ರಿಸಲು ಪ್ರತಿವರ್ಷ ಈ ಕಾರ್ಯಕ್ರಮವನ್ನು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಚರಿಸಲಾಗುತ್ತದೆ ಎಂದು ಸಭೆಗೆ ವಿವರಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ॥ ಲಿಂಗರಾಜು ಟಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ॥ ರವೀಂದ್ರನಾಥ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ॥ ನಂದಕುಮಾರ, ಜಿಲ್ಲಾ ಕ್ಷಯರೋಗ ನಿರ್ಮೂಲನ ಅಧಿಕಾರಿಗಳಾದ ಡಾ॥ ಶಶಿಧರ್, ಜಿಲ್ಲಾ ಕುಷ್ಠರೋಗ ನಿರ್ಮೂಲನ ಅಧಿಕಾರಿಗಳಾದ ಡಾ॥ ಪ್ರಾಕಾಶ ಹೆಚ್, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳಾದ ಡಾ॥ ಕುಮಾರಸ್ವಾಮಿ, ತಾಲೂಕಾ ಆರೋಗ್ಯಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಕೊಪ್ಪಳ ವೈದ್ಯಕೀಯ ಮಹಾ ವಿದ್ಯಾಲಯದ ಹಿರಿಯ ತಜ್ಞ ವೈದ್ಯರು, ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಯ ತಾಲೂಕ ಮಟ್ಟದ ಅಧಿಕಾರಿಗಳು, ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳು ಹಾಜರಿದ್ದರು.

# ವ್ಯಕ್ತಿ ಕಾಣೆ: ಪತ್ತೆಗೆ ಸಹಕರಿಸಲು ಮನವಿ

**ಕೊಪ್ಪಳ :** ಅಳವಂಡಿ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟಗೇರಿ ನಿವಾಸಿ ಶರಣಬಸವ ಅಂದಪ್ಪ ಮೆಣಸಿನಕಾಯಿ ಎಂಬ 47 ವರ್ಷದ ವ್ಯಕ್ತಿಯು ಜೂನ್ 07 ರಿಂದ ಕಾಣೆಯಾಗಿದ್ದು, ಈವರೆಗೂ ಪತ್ತೆಯಾಗಿರುವುದಿಲ್ಲ. ಈ ಕುರಿತು ಅಳವಂಡಿ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.55/2025 ಕಲಂ ಮನುಷ್ಯ ಕಾಣೆ ಅಡಿ ಪ್ರಕರಣ ದಾಖಲಾಗಿದೆ.



ಕಾಣೆಯಾದ ವ್ಯಕ್ತಿಯ ಚಹರೆ:

ವ್ಯಕ್ತಿಯು 5.30 ಅಡಿ ಎತ್ತರ, ಸಾಧಾರಣ ಮೈಕಟ್ಟು, ಗೋಧಿ ಮೈಬಣ್ಣ ಹೊಂದಿದ್ದು, ಕಾಣೆಯಾದಾಗ ತಿಳಿ ಗುಲಾಬಿ ಬಣ್ಣದ ಅಂಗಿ ಮತ್ತು ಕಪ್ಪು ಬಣ್ಣ ಪ್ಯಾಂಟ್ ಧರಿಸಿದ್ದರು. ಕನ್ನಡ ಭಾಷೆ ಮಾತನಾಡುತ್ತಾರೆ.

ಮೇಲ್ಕಂಡ ಚಹರೆಯ ವ್ಯಕ್ತಿ ಕುರಿತು ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಎಸ್‌ಪಿ: 08539–230111, ಡಿವೈಎಸ್‌ಪಿ:08539–230342, ಸಿಪಿಐ(ಗ್ರಾ):08539–231333, ಪಿಎಸ್‌ಐ ಅಳವಂಡಿ: 08539–285233, ಮೊ.ಸಂ. 9480803747, ಜಿಲ್ಲಾ ಕಂಟ್ರೋಲ್ ರೂಂ. 08539–230222, 100 ಗೆ ಸಂಪರ್ಕಿಸಿ ಮಾಹಿತಿ ನೀಡಬಹುದು ಎಂದು ಅಳವಂಡಿ ಪೊಲೀಸ್ ಠಾಣೆ ಪ್ರಕಟಣೆ ಕೋರಿದೆ.

# ಲೇವಾದೇವಿ, ಗಿರವಿದಾರ ಹಾಗೂ ಹಣಕಾಸು ಸಂಸ್ಥೆಗಳ ಪರವಾನಿಗೆ ನವೀಕರಣಕ್ಕೆ ಸೂಚನೆ

**ಬಾಗಲಕೋಟ :** ಬಾಗಲಕೋಟ ಉಪವಿಭಾಗ ವ್ಯಾಪ್ತಿಯ ಲೇವಾದೇವಿ, ಗಿರವಿದಾರ ಹಾಗೂ ಹಣಕಾಸು ಸಂಸ್ಥೆಗಳ ಪರವಾನಿಗೆ ನವೀಕರಣ ಅವಧಿಯು ಮಾರ್ಚ 31ರಂದು ಮುಕ್ತಾಯವಾಗಿರುವ ಕಾರಣ ಕರ್ನಾಟಕ ಲೇವಾದೇವಿ ಕಾಯ್ದೆ 1961ರ ಪ್ರಕಾರ ಈ ಸಂಸ್ಥೆಗಳು ತಮ್ಮ ಪರವಾನಿಗೆ ನವೀಕರಣ ಮಾಡಿಸಬೇಕು.

ನಿಗದಿತ ಶುಲ್ಕ ಪಾವತಿಸದೇ ನಂತರ ಸಲ್ಲಿಸಲಾದ ಅರ್ಜಿಗಳಿಗೆ ಕಲಂ 6(4) ಅಡಿಯಲ್ಲಿ ದುಪ್ಪಟ್ಟು ಶುಲ್ಕ ವಿಧಿಸಲಾಗುತ್ತದೆ. ಅಲ್ಲದೆ ವ್ಯವಹಾರದ ಮೊತ್ತದ ಪ್ರಕಾರ ಭದ್ರತಾ ಠೇವಣಿಯನ್ನು ಪಾವತಿಸಬೇಕು.

ನವೀಕರಣ ಮಾಡದ ಸಂಸ್ಥೆಗಳ ಪರವಾನಿಗೆ ರದ್ದು ಮಾಡಲಾಗುವುದು ಹಾಗೂಭದ್ರತಾಠೇವಣಿಮೊತ್ತವನ್ನುಸರ್ಕಾರಜಪ್ತಿಮಾಡಲಾಗುವುದೆಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪವನ ಶಕ್ತಿಯು ಭಾರತದ ನವೀಕರಿಸಬಹುದಾದ ಇಂಧನ ವಲಯದ ಕಾರ್ಯತಂತ್ರದ ಕೇಂದ್ರಬಿಂದು: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

**ಜಾಗತಿಕ ಪವನ ದಿನ 2025ರ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಜೋಶಿ ಅವರು ಇಂದು ಬೆಂಗಳೂರಿನಲ್ಲಿ ನಡೆದ ಪಾಲುದಾರರ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದರು ಉತ್ಪಾದನೆಗೆ ನವೀಕರಿಸಬಹುದಾದ ಇಂಧನ ಮತ್ತು ಮನೆ ಬಳಕೆಗೆ ಸಾಂಪ್ರದಾಯಿಕ ಇಂಧನ, ಇದು ಮಾನ್ಯ ಪ್ರಧಾನಮಂತ್ರಿಗಳ ದೃಷ್ಟಿಕೋನ: ಪ್ರಲ್ಹಾದ್ ಜೋಶಿ**

ವಿಶ್ವ ಪವನ ದಿನ 2025" ರ ಅಂಗವಾಗಿ ಇಂದು ಬೆಂಗಳೂರಿನಲ್ಲಿ ನಡೆದ ಪಾಲುದಾರರ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಶ್ರೀ ಪ್ರಲ್ಹಾದ್ ಜೋಶಿ ಅವರು, "ನವೀಕರಿಸಬಹುದಾದ ಇಂಧನ ವಲಯದಲ್ಲಿ ಭಾರತದ ಕಾರ್ಯತಂತ್ರದಲ್ಲಿ ಪವನ ಶಕ್ತಿಯು ಕೇಂದ್ರ ಸ್ಥಾನದಲ್ಲಿದೆ" ಎಂದು ಹೇಳಿದರು.




ಈ ಸಂದರ್ಭದಲ್ಲಿ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ರಾಜ್ಯ ಸಚಿವರಾದ ಶ್ರೀ ಶ್ರೀಪಾದ್ ಯೆಸ್ಸೊ ನಾಯಕ್ ಮತ್ತು ಕರ್ನಾಟಕ ಸರ್ಕಾರದ ಇಂಧನ ಸಚಿವರಾದ ಶ್ರೀ ಕೆ.ಜಿ. ಜಾರ್ಜ್ ಅವರೂ ಉಪಸ್ಥಿತರಿದ್ದರು. ಭಾರತವು ಜಾಗತಿಕ ಉತ್ಪಾದನಾ ಕೇಂದ್ರವಾಗಲು, ಅದಕ್ಕೆ ಸೌರಶಕ್ತಿ, ಪವನಶಕ್ತಿ ಅಥವಾ ಇನ್ಯಾವುದೇ ರೂಪದ ಶಕ್ತಿಯಿರಲಿ, ಒಟ್ಟಿನಲ್ಲಿ ಶಕ್ತಿಯ ಅಗತ್ಯವಿದೆ ಎಂದು ಶ್ರೀ ಪ್ರಲ್ಹಾದ್ ಜೋಶಿ ಅವರು ನುಡಿದರು.

ನಮ್ಮ ರಾಷ್ಟ್ರೀಯ ಗುರಿಗಳು ಮಹತ್ವಾಕಾಂಕ್ಷಿ ಮತ್ತು ಸ್ಪಷ್ಟವಾಗಿವೆ: 2030ರ ವೇಳೆಗೆ ನಮ್ಮ ವಿದ್ಯುತ್ ಸಾಮರ್ಥ್ಯದ ಶೇ. 50 ರಷ್ಟನ್ನು ಪಳೆಯುಳಿಕೆಯೇತರ ಇಂಧನ ಮೂಲಗಳಿಂದ ಪಡೆಯುವುದು ಮತ್ತು 2070ರ ವೇಳೆಗೆ 'ನಿವ್ವಳ–ಶೂನ್ಯ' (ನೆಟ್–ಝೀರೋ) ಭಾರತವನ್ನು ಸಾಧಿಸುವುದು. ಈ ಗುರಿಗಳನ್ನು ತಲುಪಲು ಪವನ ಶಕ್ತಿಯು ಕೇಂದ್ರಬಿಂದುವಾಗಿದೆ. ಪವನ ಶಕ್ತಿಯು ನಮ್ಮ ನವೀಕರಿಸಬಹುದಾದ ಇಂಧನ ಕಾರ್ಯತಂತ್ರದಒಂದುಭಾಗವಷ್ಟೇಅಲ್ಲ,ಅದುಅದರ ಹೃದಯಭಾಗದಲ್ಲಿದೆ ಮತ್ತು ಆತ್ಮನಿರ್ಭರ ಭಾರತದ ಕೇಂದ್ರವಾಗಿದೆ" ಎಂದು ಸಚಿವರು ಹೇಳಿದರು.

ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಒತ್ತಿ ಹೇಳಿದ ಶ್ರೀ ಜೋಶಿ ಅವರು, "ಗೌರವಾನ್ವಿತ ಪ್ರಧಾನಿಯವರು ನಮಗೆ 'ಉತ್ಪಾದನೆಗೆ ನವೀಕರಿಸಬಹುದಾದ ಇಂಧನ ಮತ್ತು ಗೃಹ ಬಳಕೆಗೆ ಸಾಂಪ್ರದಾಯಿಕ ಇಂಧನ' ಎಂಬ ದೃಷ್ಟಿಕೋನವನ್ನು ನೀಡಿದ್ದಾರೆ" ಎಂದು ತಿಳಿಸಿದರು.

ಭಾರತದ ಉತ್ಪಾದನಾ ಸಾಮರ್ಥ್ಯವು ಹೆಚ್ಚುತ್ತಿದೆ ಮತ್ತು ಅದು ಮುಂದೆಯೂ ಹೆಚ್ಚುತ್ತಲೇ ಇರುತ್ತದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು, ಗೌರವಾನ್ವಿತ ಪ್ರಧಾನಮಂತ್ರಿಯವರ ದೃಷ್ಟಿಕೋನವು ನವೀಕರಿಸಬಹುದಾದ ಇಂಧನದ ಉತ್ಪಾದನೆ, ಸಂಗ್ರಹಣೆ ಮತ್ತು ಬಳಕೆಯ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಇದರಿಂದ, ಸಮೀಪದ ಭವಿಷ್ಯದಲ್ಲಿ ಭಾರತವು ಜಾಗತಿಕ ಉತ್ಪಾದನಾ ಕೇಂದ್ರವಾದಾಗ, ಉತ್ಪಾದನಾ ವಲಯದ ಇಂಧನ ಬೇಡಿಕೆಗಳನ್ನು ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕವೇ ಪೂರೈಸಲು ಸಾಧ್ಯವಾಗಬೇಕು" ಎಂದು ಸಚಿವರು ಹೇಳಿದರು.

ನವೀಕರಿಸಬಹುದಾದ ಇಂಧನ ವಲಯದಲ್ಲಿ ಭಾರತವು ಬೃಹತ್ ಸಾಮರ್ಥ್ಯವನ್ನು ಹೊಂದಿದೆ, ಏಕೆಂದರೆ ಅದು ವಿಶ್ವದಲ್ಲಿಯೇ ನಾಲ್ಕನೇ ಅತಿ ದೊಡ್ಡ ಪವನ ಶಕ್ತಿ ಸ್ಥಾಪಿತ ಸಾಮರ್ಥ್ಯವನ್ನು ಹೊಂದಿದೆ ಮತ್ತು ಮೂರನೇ ಅತಿದೊಡ್ಡ ನವೀಕರಿಸಬಹುದಾದ ಇಂಧನ ಉತ್ಪಾದಕ ರಾಷ್ಟ್ರವಾಗಿದೆ. 'ಕೇವಲ 10 ವರ್ಷಗಳಲ್ಲಿ ಭಾರತವು ವಿಶ್ವದ ಮೂರನೇ ಅತಿದೊಡ್ಡ ನವೀಕರಿಸಬಹುದಾದ ಇಂಧನ ಉತ್ಪಾದಕನಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ, ಆದರೆ ಇಂದು ಅದು ವಾಸ್ತವವಾಗಿದೆ' ಎಂದು ಸಚಿವರು ನುಡಿದರು.

ಸಚಿವರು ಪವನ ಶಕ್ತಿ ವಲಯಕ್ಕೆ ಸಂಬಂಧಿಸಿದಂತೆ ಮೂರು ಪ್ರಮುಖ ವಿಷಯಗಳನ್ನು ಒತ್ತಿ ಹೇಳಿದರು: "ಮೊದಲನೆಯದಾಗಿ, ನಿರಂತರ ವಿದ್ಯುತ್ ಪೂರೈಕೆ ಮತ್ತು ಗ್ರಿಡ್ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ನಾವು ಪವನ ಶಕ್ತಿಯನ್ನು ಸೌರಶಕ್ತಿ ಮತ್ತು ಸಂಗ್ರಹಣೆಯೊಂದಿಗೆ (ಃಇಖಖ) ಸಂಂ–ಯೋಜಿಸಬೇಕು.

ಎರಡನೆಯದಾಗಿ, ಸುಂಕಗಳು ಸ್ಪರ್ಧಾತ್ಮಕವಾಗಿರಬೇಕು. ಪ್ರತಿ ಯೂನಿಟ್ಗೆ ?3.90 ದರವು ತುಂಬಾ ಹೆಚ್ಚಾಗಿದೆ; ವೆಚ್ಚಗಳನ್ನು ಕಡಿಮೆ ಮಾಡಲು ನಾವು ಒಟ್ಟಾಗಿ ಕೆಲಸ ಮಾಡಬೇಕು.

ಮೂರನೆಯದಾಗಿ, ದೇಶೀಯ ಉತ್ಪಾದನೆಯು ನಮ್ಮ ಸ್ವಂತ ಗುರಿಗಳನ್ನು ಪೂರೈಸಲು ಮಾತ್ರವಲ್ಲದೆ, ರಫ್ತುಗಳನ್ನು ಹೆಚ್ಚಿಸಲು ಹೆಚ್ಚು ಪರಿಣಾಮಕಾರಿಯಾಗಬೇಕು."

ನವೀಕರಿಸಬಹುದಾದ ಇಂಧನ ವಲಯದ ಸಾಮರ್ಥ್ಯವನ್ನು ಅನಾವರಣಗೊಳಿಸಲು ಭಾರತ ಸರ್ಕಾರ ಕೈಗೊಳ್ಳುತ್ತಿರುವ ಸಮರ್ಪಿತ ಪ್ರಯತ್ನಗಳನ್ನು ಒತ್ತಿಹೇಳಿದಶ್ರೀಜೋಶಿ,"ಸರ್ಕಾರವುಈವಲಯವನ್ನು ಸಂಪೂರ್ಣ ಗಂಭೀರತೆಯಿಂದ ಬೆಂಬಲಿಸುತ್ತಿದೆ. ಈ ವರ್ಷ ನವೀಕರಿಸಬಹುದಾದ ಇಂಧನ ಬಜೆಟ್ 53% ರಷ್ಟು ಹೆಚ್ಚಾಗಿ, ?26,549 ಕೋಟಿಗೆ ಏರಿದೆ, ಇದರಲ್ಲಿ ದೊಡ್ಡ ಪಾಲು ಪವನ ಶಕ್ತಿಗೆ ನಿರ್ದೇಶಿಸಲಾಗಿದೆ," ಎಂದರು.

"ನವೀಕರಿಸಬಹುದಾದ ಇಂಧನಗಳಿಗೆ ಪರಿವರ್ತನೆಯು ಅನಿವಾರ್ಯವಾಗಿದೆ. ರಾಜ್ಯಗಳು ಈ ಪರಿವರ್ತನೆಯನ್ನು ಮುನ್ನಡೆಸಬೇಕು. ಭೂ ಲಭ್ಯತೆ ಮತ್ತು ಪ್ರಸರಣ ವಿಳಂಬಗಳನ್ನು ನಿವಾರಿಸಬೇಕು. ಇದು ಹಿಂಜರಿಕೆಯ ಸಮಯವಲ್ಲ, ಇದು ಅನುಷ್ಠಾನದ ಸಮಯ," ಎಂದು ಸಚಿವರು ಸೇರಿಸಿದರು.

ಸಚಿವರು, "ಭಾರತವು 225 ಇಫ ನಿಂದ 5.2 ಒಫ ವರೆಗಿನ ಪವನ ಟರ್ಬೈನ್‌ಗಳನ್ನು ತಯಾರಿಸುತ್ತಿದೆ, 14 ಕಂಪನಿಗಳಿಂದ 33 ಮಾದರಿಗಳನ್ನು ಉತ್ಪಾದಿಸಲಾಗುತ್ತಿದೆ ಎಂಬುದನ್ನು ಗಮನಿಸಲು ನನಗೆ ಸಂತೋಷವಾಗಿದೆ. ಈ ಟರ್ಬೈನ್‌ಗಳು ನಮ್ಮ ದೇಶೀಯ ಅಗತ್ಯಗಳನ್ನು ಪೂರೈಸುತ್ತವೆ ಮತ್ತು ಜಾಗತಿಕವಾಗಿಯೂ ವೆಚ್ಚ–ಸ್ಪರ್ಧಾತ್ಮಕವಾಗಿವೆ," ಎಂದು ಹೇಳಿದರು.

ಸಚಿವರು, ರಾಷ್ಟ್ರೀಯ ಪವನ ಶಕ್ತಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅನಾವರಣಗೊಳಿಸಲು, ನಮಗೆ ಸಮನ್ವಯದ ರಾಷ್ಟ್ರೀಯ ಪ್ರಯತ್ನದ ಅಗತ್ಯವಿದೆ ಎಂದು ಹೇಳಿದರು. ಅದಕ್ಕಾಗಿಯೇ ನಾವು 5 ಆದ್ಯತೆಗಳ ಮೇಲೆ ಗಮನ ಹರಿಸುತ್ತಿದ್ದೇವೆ:

i. ಮಧ್ಯಪ್ರದೇಶ, ತೆಲಂಗಾಣ ಮತ್ತು ಒಡಿಶಾದಂತಹ ಹೊಸ ರಾಜ್ಯಗಳಿಗೆ ವಿಸ್ತರಿಸುವುದು.

ii. ಗುಜರಾತ್ ಮತ್ತು ತಮಿಳುನಾಡಿನಲ್ಲಿ 4 ಉಫ ನಷ್ಟು ಲೀಸಿಂಗ್ ಪ್ರದೇಶಗಳನ್ನು ಗುರುತಿಸುವ ಮೂಲಕ ಕಡಲಾಚೆಯ (ಠಿಜಿಜ್ಝಿಠಿಡಿಜ) ವಲಯವನ್ನು ಪ್ರಾರಂಭಿಸುವುದು ಮತ್ತು ಟೆಂಡರ್ಗಳನ್ನು ಸಿದ್ಧಪಡಿಸುವುದು.

iii. ಸಂಗ್ರಹಣಾ–ಸಂಬಂಧಿತ ವ್ಯವಹಾರ ಮಾದರಿಗಳ ಮೂಲಕ ಪವನ ಶಕ್ತಿಯನ್ನು ನಿರಂತರ ಮತ್ತು ದೃಢವಾದ ಹಸಿರು ವಿದ್ಯುತ್ ತಂತ್ರಗಳಲ್ಲಿ ಅಳವಡಿಸಿಕೊಳ್ಳುವುದು.

iv. ಗ್ರಿಡ್ ಅನ್ನು ಆಧುನೀಕರಿಸುವುದು, ವೇರಿಯಬಲ್ ನವೀಕರಿಸಬಹುದಾದ ಇಂಧನವನ್ನು ನಿರ್ವಹಿಸಲು ಂಖ–ಆಧಾರಿತ ಮುನ್ಸೂಚನೆಯಲ್ಲಿ ಹೂಡಿಕೆ ಮಾಡುವುದು.

v. ಸಂಪೂರ್ಣ ಪವನ ಶಕ್ತಿ ಮೌಲ್ಯ ಸರಪಳಿಯಲ್ಲಿ ಸ್ಥಳೀಯ ಉತ್ಪಾದನೆಯನ್ನು ಹೆಚ್ಚಿಸುವುದು.

ಕೇಂದ್ರಸಚಿವರಾದಜೋಶಿಅವರುಕಾರ್ಯಕ್ರಮದಲ್ಲಿ ಪವನಶಕ್ತಿರೋಡ್‌ಮ್ಯಾಪ್‌ಮತ್ತುಉತ್ಪಾದನಾರೋಡ್ ಮ್ಯಾಪ್ ಕುರಿತ ವರದಿಗಳನ್ನು ಬಿಡುಗಡೆ ಮಾಡಿದರು. ಈ ದಾಖಲೆಗಳು ನಮ್ಮ ಮುಂದಿನ ಪಯಣಕ್ಕೆ ಮಾರ್ಗದರ್ಶಕ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ಭಾರತದಲ್ಲಿ ಬಲವಾದ ಮತ್ತು ಆತ್ಮನಿರ್ಭರ ಪವನ ಶಕ್ತಿ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ನಮ್ಮ ಸಾಮೂಹಿಕ ಮಹತ್ವಾಕಾಂಕ್ಷೆ, ಕಾರ್ಯತಂತ್ರದ ಚಿಂತನೆ ಮತ್ತು ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ಹೇಳಿದರು. ಪವನ ಸಾಮರ್ಥ್ಯ ಹೆಚ್ಚಳದಲ್ಲಿ ಉತ್ತಮ ಸಾಧನೆ ಮಾಡಿದ ರಾಜ್ಯಗಳನ್ನು ಸಹ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕರ್ನಾಟಕವು 1331.48 ಒಫ ಪವನ ಸಾಮರ್ಥ್ಯ ಹೆಚ್ಚಳದೊಂದಿಗೆ ಪ್ರಥಮ ಸ್ಥಾನದಲ್ಲಿದ್ದು, ನಂತರ ತಮಿಳುನಾಡು (1136.37 ಒಫ) ಮತ್ತು ಗುಜರಾತ್ (954.76 ಒಫ) ಸ್ಥಾನ ಪಡೆದಿವೆ.

ಜಾಗತಿಕ ಪವನ ದಿನದ ಬಗ್ಗೆ ಪವನ ಶಕ್ತಿಯ ಅಭಿವೃದ್ಧಿಯನ್ನು ಗುರುತಿಸಲು ಪ್ರತಿ ವರ್ಷ ಜೂನ್ 15 ರಂದು ವಿಶ್ವ ಪವನ ದಿನವನ್ನು ಆಚರಿಸಲಾಗುತ್ತದೆ. ಸರ್ಕಾರದ ನಿರಂತರ ನೀತಿ ಬೆಂಬಲದಿಂದಾಗಿ, ಭಾರತದ ಪವನ ಶಕ್ತಿ ವಲಯವು ಗಣನೀಯ ಬೆಳವಣಿಗೆಯನ್ನು ಕಂಡಿದೆ. ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯವು ಆಯೋಜಿಸುವ ಈ ಕಾರ್ಯಕ್ರಮದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರಗಳಪ್ರಾಧಿಕಾರಗಳು,ವಿದ್ಯುತ್‌ವಿತರಣಾ ಕಂಪನಿಗಳು (ಡಿಸ್ಕಾಂಗಳು), ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳು (ಸಿ ಪಿ ಎಸ್ ಯು ಗಳು), ಪವನ ಶಕ್ತಿ ಉದ್ಯಮ, ಶೈಕ್ಷಣಿಕ ವಲಯ, ಮತ್ತು ಚಿಂತಕರ ಚಾವಡಿ (ಥಿಂಕ್ ಟ್ಯಾಂಕ್)ಗಳ ಪ್ರಮುಖ ಪಾಲುದಾರರು ಭಾಗವಹಿಸುತ್ತಾರೆ. ದೇಶದ ಪವನ ಶಕ್ತಿ ಅಭಿವೃದ್ಧಿಯ ಪ್ರಗತಿ ಸೇರಿದಂತೆ, ಪ್ರಮುಖ ಅಂಶಗಳ ಕುರಿತು ಸಂವಾದವನ್ನು ಸುಗಮಗೊಳಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ. ಈ ಕಾರ್ಯಕ್ರಮಕ್ಕೆ ವಿಂಡ್ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್ ಅಸೋಸಿಯೇಷನ್ಸ್ (ಘಌಕಕಂ), ಇಂಡಿಯನ್ ವಿಂಡ್ ಟರ್ಬೈನ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ (ಌಘಖಿಒಂ), ಮತ್ತು ಇಂಡಿಯನ್ ವಿಂಡ್ ಪವರ್ ಅಸೋಸಿಯೇಷನ್ (ಌಘಕಂ) ಸಹ ಬೆಂಬಲ ನೀಡಿವೆ.

# ಗೋಕಾಕ ಬಸ್ ನಿಲ್ದಾಣ ತಾತ್ಕಾಲಿಕ ಸ್ಥಳಾಂತರ

**ಬೆಳಗಾವಿ :** ಗೋಕಾಕ ಬಸ್ ನಿಲ್ದಾಣದಲ್ಲಿ ಡಾಂಬರೀಕರಣ ಹಾಗೂ ನವೀಕರಣ ಕಾರ್ಯ ನಡೆಯುವ ಕಾರಣ ದಿನಾಂಕ: 11–6–2025 ರಿಂದ ಒಂದು ವಾರದವರಗೆ ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ನಗರದ ಶ್ರೀ ವಾಲ್ಮೀಕಿ ಕ್ರೀಡಾಂಗಣಕ್ಕೆ ಸ್ಥಳಾಂತರಿಸಿದ್ದು, ಸಾರ್ವಜನಿಕ ಪ್ರಯಾಣಿಕರು ಸಾರಿಗೆ ಸೇವೆಯನ್ನು ಶ್ರೀ ವಾಲ್ಮೀಕಿ ಕ್ರೀಡಾಂಗಣದಿಂದಲೇ ಪಡೆದು ಸಹಕರಿಸಬೇಕು ಎಂದು ವಾ.ಕ.ರ.ಸಾ.ಸಂಸ್ಥೆ, ಚಿಕ್ಕೋಡಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಯಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಬೆಳಗಾವಿ :** 2025–26 ನೇ ಸಾಲಿನ ಖಾನಾಪೂರ ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರದೇಶ ವಿಸ್ತರಣೆದಡಿ ಬಾಳೆ (Tissue culture ಹಾಗೂ ಕಂದು), ಗೋಡಂಬಿ, ಮಾವು, ಡ್ರಾಗನ್ನ ಹಣ್ಣು, ಬೇಣ್ಣೆ ಹಣ್ಣು ಹಾಗೂ ತರಕಾರಿ ಬೆಳೆಗಳಿಗೆ, ಕೃಷಿಹೊಂಡ (20*20*3) ಮೀ ಅಳತೆ, ಹಸಿರು ಮನೆ, ಪ್ಲಾಸ್ಟೀಕ ಹೊದಿಕೆ ಘಟಕ ನಿರ್ಮಾಣಕ್ಕೆ, 20 ಹೆಚ್.ಪಿ ಕಿಂತ ಕಡಿಮೆ ಸಾಮರ್ಥ್ಯ ಟ್ರ್ಯಾಕ್ಟರ ಸಹಾಯಧನ ಲಭ್ಯವಿರುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ನೀರು ಸಂಗ್ರಹಣಾ ಘಟಕ ಸೋಲಾರ ಪಂಪಸೆಟ್, ಪ್ಲಾಸ್ಟೀಕ ಕ್ರೇಟ್ಸ್, ಹಣ್ಣು ಮಾಗಿಸುವ ಘಟಕ ಮತ್ತು ಲಘು ಪೋಷಕಾಂಶಗಳಿಗೆ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಅಳವಡಿಸಲು ಶೇ90% ರಷ್ಟು, ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ತಾಳೆ ಎಣ್ಣೆ ವ್ಯವಸಾಯದಡಿ ತಾಳೆ ಪ್ರದೇಶ ವಿಸ್ತರಣೆ ಹಾಗೂ ನಿರ್ವಹಣೆಗೆ ಸಹಾಯಧನ ನೀಡಲಾಗುವುದು. ತೋಟಗಾರಿಕೆಯಾಂತ್ರಿಕರಣ ಯೋಜನೆಯಡಿ ಪವರ ಟಿಲ್ಲರ ಹಾಗೂ ಅಗತ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸಲು ಸಹಾಯಧನ ವಿತರಸಲಾಗುವುದು. ಆಸಕ್ತ ರೈತರು ರೈತ ಸಂಪರ್ಕ ಕೇಂದ್ರ ಅಧಿಕಾರಿಗಳನ್ನು ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರುರವರ ಕಛೇರಿ ಖಾನಾಪೂರಗೆ ಭೇಟಿ ನೀಡಿ ಜೂನ್.30, 2025ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಕಲಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

**ಬೆಳಗಾವಿ :** ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮ ಶೀಲತೆ ಇಲಾಖೆ ವತಿಯಿಂದ ವಿಶೇಷವಾಗಿ ವಿಕಲಚೇತನ ವಿದ್ಯಾರ್ಥಿಗಳಿಗೆ, ಪ್ರಸಕ್ತ 2025–26ನೇ ಸಾಲಿಗೆ ಸರಕಾರಿ ಪಾಲಿಟೆಕ್ನಿಕ್, ಬೆಳಗಾವಿಯಲ್ಲಿ ವಿವಿಧ ಕೋರ್ಸುಗಳಿಗೆ ವಿಕಲಚೇತನ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಡಿಪ್ಲೋಮಾ ಕೋರ್ಸಗಳಾದ ಸಿವಿಲ್ ಇಂಜನೀಯರಿಂಗ್ ಕೋರ್ಸಗೆ 4 ಸೀಟುಗಳು, ಎಲೇಕ್ಟ್ರಿಕಲ್ & ಎಲೇಕ್ಟ್ರಾನಿಕ್ಸ್ ಇಂಜನೀಯರಿಂಗ್ 4 ಸೀಟುಗಳು, ಮೆಕ್ಯಾನಿಕಲ್ ಇಂಜನೀಯರಿಂಗ್ 3 ಸೀಟುಗಳು, ಅಟೋ ಮೋಬೈಲ್ ಇಂಜನೀಯರಿಂಗ್ 2 ಸೀಟುಗಳು, ಎಲೇಕ್ಟ್ರಾನಿಕ್ಸ್ & ಕಮ್ಯುನಿಕೇಶನ ಇಂಜನೀಯರಿಂಗ್ 5 ಸೀಟುಗಳು, ಕಮರ್ಶಿಯಲ್ ಪ್ರಾಕ್ಟಿಸ್ (ಇಂಗ್ಲೀಷ) 3 ಸೀಟುಗಳು, ಕಮರ್ಶಿಯಲ್ ಪ್ರಾಕ್ಟಿಸ್ (ಕನ್ನಡ) 4 ಸೀಟುಗಳಿಗೆ ಪ್ರವೇಶಾತಿ ದೊರಕಲಿವೆ. ಸದರಿ ಕೋರ್ಸುಗಳಿಗೆ ಯಾವುದೇ ಶುಲ್ಕ ಇರುವುದಿಲ್ಲ. ಪ್ರವೇಶ ಹೊಂದಿದ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್, ಹಾಗೂ ಲಭ್ಯವಿರುವ ಇತರೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಜೂನ್.21ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ ಇಲ್ಲಿ ಭೇಟಿ ನಿಡಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಸಮಾಜ ಸೇವಕ ಮುರಿಗೆಪ್ಪ ಮಾಲಗಾರ ಅವರಿಗೆ ಬೆಂಗಳೂರಲ್ಲಿ ಇಂಡಿಯನ್ ಐಕಾನ್ ಅವಾರ್ಡ್ ಪ್ರಶಸ್ತಿ ಪ್ರಧಾನ



**ಬೆಂಗಳೂರು :** ಸಮಾಜದಲ್ಲಿ ಬಡವ ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿಗೆ ಆದ್ಯತೆ ನೀಡಿ ಸಮಾಜ ಸೇವೆ ದೇವರ ಸೇವೆ ಎಂದು ತಿಳಿದು ಸಾಕಷ್ಟು ಬಡ ಕುಟುಂಬದವರಿಗೆ ಸಹಾಯ ಸಹಕಾರ ನೀಡುತ್ತಾ ನೊಂದಬೆಂದವರಬಾಳಿಗೆಬೆಳಕಾಗಿನಿಂತುಸಮಾಜಕ್ಕೆ ಏನಾದರೆ ಕೊಡುಗೆ ನೀಡಬೇಕೆನ್ನುವ ಉದ್ದೇಶದಿಂದ ಹಗಲಿರುಳು ಸಮಾಜ ಸೇವೆ ಜೊತೆಗೆ ಪ್ರಾಮಾಣಿಕ ಪತ್ರಕರ್ತನಾಗಿ ಕಾರ್ಯ ನಿರ್ವಹಿಸುತ್ತಿರುವ ಹಳ್ಳೂರ ಗ್ರಾಮದ ಮುರಿಗೆಪ್ಪ ಬಸಪ್ಪ ಮಾಲಗಾರ ಅವರ ಸಮಾಜ ಸೇವೆಯನ್ನು ಪರಿಗಣಿಸಿ ಸರಕಾರದ ಮಾನ್ಯತೆ ಪಡೆದ ಓರಿಯೆಂಟಲ್ ಫೌಂಡೇಶನ್ ಮತ್ತಿಕೆರೆ ಎಕ್ಸ್ ಟೆನ್ಷನ್ ಬೆಂಗಳೂರ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ರವಿವಾರದಂದು ಬೆಂಗಳೂರ ಕನ್ನಡ ಸಾಹಿತ್ಯ ಪರಿಷತ್ತು ಮಂದಿರದಲ್ಲಿ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮುರಿಗೆಪ್ಪ ಬಸಪ್ಪ ಮಾಲಗಾರ ಅವರಿಗೆ ಇಂಡಿಯನ್ ಐಕಾನ್ ಅವಾರ್ಡ್ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

ಬೆಂಗಳೂರ್ ಓರಿಯೆಂಟಲ್ ಫೌಂಡೇಶನ್ ಸಂಸ್ಥಾಪಕ ರವಿಕುಮಾರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀನಿವಾಸ ಬಾಬು. ಚಲನ ಚಿತ್ರ ಖ್ಯಾತ ನಟಿ ಕಾಮಿನಿದರನ್ ಪುಷ್ಪಲತಾ. ಟಿ ತ್ಯಾಗರಾಜ್. ಡಾ ಮಂಜುಳಾ ಮಹಾದೇವ. ಎಸ್ ಎಲ್ ರವಿ. ಶೋಭಾ ರಾಣಿ. ಗಣೇಶ ಗೌಡಾ. ಪ್ರೇಮಾ ರವಿ.ಗೋಪಾಲ ರೆಡ್ಡಿ . ನಾಗೇಶ ಗೌಡಾ. ಎಂ ಸಿ ಚಂದ್ರಪ್ಪ ಸೇರಿದಂತೆ ಅನೇಕರಿದ್ದರು.ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಒಟ್ಟು 103 ಸಾಧಕ–ರಿಗೆ ಪ್ರಶಸ್ತಿ ನೀಡಿ ಗೌರವಿಸಿದರು..ಕಾರ್ಯಕ್ರಮವನ್ನು ರಾಧಾ ಶ್ಯಾನ್ಭೋಗ್ ನಿರೂಪಿಸಿ, ವಂದಿಸಿದರು.

## ಬಾಗಲಕೋಟೆ, ವಿದ್ಯಾಗಿರಿ ಹಾಗೂ ಮೆಡಿಕಲ್ ಕಾಲೇಜು ಆವರಣದಲ್ಲಿ ಬೃಹತ ಯೋಗ ಕಾರ್ಯಕ್ರಮ: 10 ಸಾವಿರ ಜನ ಸೇರುವ ನಿರೀಕ್ಷೆ

# ವಿಶ್ವಯೋಗ ದಿನಕ್ಕೆ ಅದ್ದೂರಿ ಸಿದ್ದತೆ: ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ವಿಶ್ವಯೋಗಾ ದಿನವಾದ ಜೂನ್ 21 ರಂದು ಬವಿವ ಸಂಘದ ಮೂರು ಕ್ಯಾಂಪಸ್‌ಗಳಲ್ಲಿ ಹಮ್ಮಿಕೊಂಡಿರುವ ಸಾಮೂಹಿಕ ಯೋಗ ಕಾರ್ಯಕ್ರಮದಲ್ಲಿ 10 ಸಾವಿರಕ್ಕೂ ಅಧಿಕ ಜನ ಭಾಗವಹಿಸಲಿದ್ದಾರೆ ಎಂದು ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಮಂಗಳವಾರ ಬಿವಿವಿ ಸಂಘದ ಮಿನಿ ಸಭಾಭವನದಲ್ಲಿ ನಡೆದ ವಿಶ್ವಯೋಗ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಕಳೆದ 11 ವರ್ಷಗಳಿಂದ ಯೋಗ ದಿನಾಚಾರಣೆಯನ್ನು ಆಚರಿಸಲಾಗುತಿದ್ದು. ಬವಿವ ಸಂಘದ ಬಾಗಲಕೋಟೆ ನಗರದ ಹಳೆ ಕ್ಯಾಂಪಸ್‌ನಲ್ಲಿ ತಮ್ಮ ನೇತೃತ್ವದಲ್ಲೆ ಕಾರ್ಯಕ್ರಮ ನಡೆಯಲಿದ್ದು, ಎಸ್. ಎನ್.ಮೆಡಿಕಲ್ ಕಾಲೇಜು ಆವರಣದಲ್ಲಿ ವೈದ್ಯಕೀಯ ಮಂಡಳಿ ಕಾರ್ಯಾಧ್ಯಕ್ಷ



ಅಶೋಕ ಸಜ್ಜನ ಬೇವೂರ ನೇತೃತ್ವದಲ್ಲಿ ಹಾಗೂ ವಿದ್ಯಾಗಿರಿ ಇಂಜನಿಯರಿಂಗ್ ಕಾಲೇಜು ಆವರಣದಲ್ಲಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ನೇತೃತ್ವ ವಹಿಸಲಿದ್ದಾರೆ, ಬೆಳಿಗ್ಗೆ 6:30ಕ್ಕೆ ಕೇಂದ್ರದ ಆಯುಷ್ ಇಲಾಖೆ ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಸಲಾಗುತ್ತಿದ್ದು, ಭಾರತದ ಹೆಮ್ಮೆಯಾಗಿರುವ ಯೋಗದಿನವನ್ನು ಯಶಸ್ವಿಗೊಳಿಸಲು ನಗರದ ಜನ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿಸಿದರು,

ಮೂರು ಕ್ಯಾಂಪಸ್‌ಗಳಲ್ಲಿ ನುರಿತ ಯೋಗ ಪಟುಗಳು ಯೋಗ ಮಾಡಿಸಲಿದ್ದು, ಈಗಾಗಲೇ ಅವರನ್ನು ಸಂಪರ್ಕಿಸಲಾಗಿದೆ, ಎಲ್ಲ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ ಎಂದರು.

ಸಂಘದಗೌರವಕಾರ್ಯದರ್ಶಿಮಾತನಾಡಿ ಸರ್ಕಾರದ ಶಿಷ್ಟಾಚಾರದಂತೆ 45 ನಿಮಿಷದ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದೆ, ವ್ಯಾಯಾಮದಿಂದ ದೇಹ ಬಳಲಬಹುದು ಆದರೆ ಯೋಗ ಎನ್ನುವುದು ವೈಜ್ಞಾನಿಕ ಕ್ರಮವಾಗಿದ್ದು ಮಾನಸಿಕ ಹಾಗೂ ದೈಹಿಕ ವಿಕಸನಕ್ಕೆ ಅನುಕೂಲ ಕಲ್ಪಿಸಲಿದೆ ಎಂದು ಹೇಳಿದರು.

ಸಭೆಯಲ್ಲಿವೈದ್ಯಕೀಯಮಹಾವಿದ್ಯಾಲಯದ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ, ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಗುರುಬಸವ ಸೂಳಿಬಾವಿ, ಮಲ್ಲಿಕಾರ್ಜುನ ಸಾಸನೂರ, ಮಹಾಂತೇಶ ಶೆಟ್ಟರ, ಶಿವಲಿಂಗಪ್ಪ ಮೊರಬದ, ಮಹೇಶ ಕಕರಡ್ಡಿ, ಕುಮಾರಸ್ವಾಮಿ ಹಿರೇಮಠ, ಕುಮಾರ ಜಿಗಜಿನ್ನಿ, ವಿವಿಧ ಮಹಾವಿದ್ಯಾಲಯಗಳ ಪಾಚಾರ್ಯರು ಭಾಗವಹಿಸಿದ್ದರು.

## ಕಲಾವಿದರೊಂದಿಗೆ ಮಾಜಿ ಶಾಸಕ ಎಸ್. ಜಿ. ನಂಜಯ್ಯನಮಠ



**ಬಾಗಲಕೋಟೆ :** ಕಲಾವಿದರ ಬದುಕು, ಅವರ ಕಷ್ಟ–ನಷ್ಟಗಳು, ಅವರು ಜೀವನ ಸಾಗಿಸಲು ನಡೆಸುವ ಹೋರಾಟಗಳನ್ನು ನಾನು ಹತ್ತಿರದಿಂದ ಕಂಡಿದ್ದೇನೆ. ಕಲಾವಿದರು ಶ್ರೀಮಂತರಲ್ಲ.

ಹಾಗಾಗಿ ಕಲಾವಿದರ ಸಮಸ್ಯೆಗಳು ಏನೇ ಇರಲಿ ಅವೆಲ್ಲವುಗಳನ್ನು ನನ್ನ ಹೆಗಲ ಮೇಲೆ ಹೊತ್ತುಕೊಂಡು ಪರಿಹಾರ ದೊರಕಿಸಿ ಕೊಡುವ ಕೆಲಸವನ್ನು ಮಾಡುತ್ತೇನೆ ಎಂದು ಮಾಜಿ ಶಾಸಕ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಎಸ್. ಜಿ. ನಂಜಯ್ಯನಮಠ ಹೇಳಿದರು.

ಅವರು ಜೂನ್ 17 ರಂದು ಗದ್ದನಕೇರಿ ಲಡ್ಡು ಮುತ್ಯಾ ದೇವಸ್ಥಾನದಲ್ಲಿ ಕರ್ನಾಟಕ ರಾಜ್ಯ ಸರ್ವ ಕಲಾವಿದರ ಒಕ್ಕೂಟವು ಆಯೋಜಿಸಿದ್ದ ಸರ್ವ ಕಲಾವಿದರ ಮೂರನೇ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಸರ್ವ ಕಲಾವಿದರ ಒಕ್ಕೂಟದ ಅಧ್ಯಕ್ಷ ಸಿದ್ಧಾರೂಢ ಭಾರತಿ ಆಶ್ರಮದ ಶರಣಬಸವ ಶಾಸ್ತ್ರಿಗಳು ಮಂಡಿಸಿದ ಹಲವು ವಿಚಾರಗಳನ್ನು ಆಲಿಸಿ ಮಾತನಾಡಿದ ನಂಜಯ್ಯನಮಠ, ನಾನು ಕೂಡ ನಿಮ್ಮೊಂದಿಗೆ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಜೂನ್ 18 ರಂದು ಸಹಾಯಕ ನಿರ್ದೇಶಕರ ಕಚೇರಿಗೆ ಆಗಮಿಸಿ ಅಧಿಕಾರಿಗಳ ಜೊತೆ ಮಾತನಾಡಿ ಪರಿಹಾರ ಒದಗಿಸುವ ಕಾರ್ಯ ಮಾಡುತ್ತೇನೆ ಎಂದು ಸಭೆಯಲ್ಲಿ ಕಲಾವಿದರಿಗೆ ಬೆಂಬಲ ಸೂಚಿಸಿ ಮಾತನಾಡಿದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿಣಿ ಶ್ರೀಮತಿ ಪವಿತ್ರ ಜಕ್ಕಪ್ಪನವರ, ಗೌರವಾಧ್ಯಕ್ಷರಾದ ಚಿನ್ನಪ್ಪಗೌಡ ಗಿಡ್ಡಪ್ಪಗೋಳ, ಕಲಾವಿದರ ಸಮಸ್ಯೆಗಳನ್ನು ಹಂಚಿಕೊಂಡರು. ಮುಖಂಡರಾದ ಯಲ್ಲಪ್ಪ ಪೂಜಾರ, ಶಂಕರಪ್ಪ ತಂಬಾಕದ, ಶಂಕರ ಲಮಾಣಿ, ಈಶ್ವರ್ ಹೊರಟ್ಟಿ, ರಾಮಪ್ಪ ಕನಸಗೇರಿ, ಲಕ್ಕವ್ವ ಕಪರಟ್ಟಿ, ಪಾಂಡುರಂಗ ಕನಸಗೇರಿ ಮುಂತಾದವರು ಸೇರಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ವೆಂಕಪ್ಪ ಸುಗತೇಕರ ಅವರನ್ನು ಮುರನಾಳದ ಮಳೆರಾಜೇಂದ್ರ ಮಹಾಸ್ವಾಮಿಗಳ ಸಾನಿಧ್ಯದಲ್ಲಿ ಗೌರವಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲೆಯ ಇಪ್ಪತ್ತಕ್ಕೂ ಹೆಚ್ಚು ಕಲಾವಿದರನ್ನು ಸತ್ಕ–ರಿಸಲಾಯಿತು.

## ಯಾವುದೇ ಕಾರಣಕ್ಕೂ ರೈತರಿಗೆ ಸಮಸ್ಯೆ ತಲೆದೂರಬಾರದು: ಕೆ.ನೇಮಿರಾಜ್ ನಾಯ್ಕ್

# ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ಸರಿಯಾಗಿ ತಲುಪಲಿ

**ಕೊಟ್ಟೂರು :** ಕೊಟ್ಟೂರು ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸನ್ಮಾನ್ಯ ಶ್ರೀ ಕೆ.ನೇಮಿರಾಜ್ ನಾಯ್ಕ್ ಶಾಸಕರು ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳು( ಕೆಡಿಪಿ) ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಗುರುವಾರ ಜರುಗಿತು.

ಮಾನ್ಯ ಶ್ರೀ ಡಾ.ಬಿ.ಆನಂದಕುಮಾರ್, ಕಾರ್ಯನಿರ್ವಾಹಕ ಅಧಿಕಾರಿಗಳು ತಾ.ಪಂ.ಕೊಟ್ಟೂರು, ಮಾನ್ಯ ಶ್ರೀ ಜಿ.ಕೆ. ಅಮರೇಶ್ ತಹಸೀಲ್ದಾರರು, ತಾಲೂಕು ಪಂಚಾಯಿತಿಯ ನಾಮ ನಿರ್ದೇಶಿತ ಸದಸ್ಯರು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಎಲ್ಲಾ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಜರಿದ್ದು ತಮ್ಮ ಇಲಾಖೆಯ ಪ್ರಗತಿಯನ್ನು ಪ್ರಸ್ತುತ ಪಡಿಸಿದರು.

ಸನ್ಮಾನ್ಯ ಶಾಸಕರು ಶ್ರೀ ನೇಮಿರಾಜ್ ನಾಯ್ಕ್ ಅವರು ಮಾತನಾಡಿ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ರೈತರಿಗೆ ಯಾವ ರೀತಿಯ ಪರಿಕರಗಳನ್ನು ಕೊಡಲಾಗುತ್ತಿದೆ.

ಬಿತ್ತನೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಮರ್ಪಕವಾಗಿ ಬಿತ್ತನೆ ಬೀಜ, ರಸಗೊಬ್ಬರವನ್ನು ಪೂರೈಸಬೇಕು.




ಯಾವುದೇ ಕಾರಣಕ್ಕೂ ಸಮಸ್ಯೆ ತಲೆದೂರಬಾರದು ಎಂದು ಸೂಚಿಸಿದರು. ಕಳಪೆ ಬೀಜದ ಸಮಸ್ಯೆಯಾಗಿಲ್ಲ. ಡಿಎಪಿ ರಸಗೊಬ್ಬರ ಕೊರತೆ ಇದೆ. ಅದಕ್ಕೆ ಪರ್ಯಾಯವಾಗಿ 20–20 ಗೊಬ್ಬರವನ್ನು ಪೂರೈಸಲಾಗುತ್ತಿದೆ.

ರೈತರಿಗೆ ಬೆಳೆ ವಿಮೆ ಸಮರ್ಪಕವಾಗಿ ತಲುಪಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಗ್ರಾಮೀಣ ಕುಡಿಯುವ ನೀರು ಇಲಾಖೆಗೆ ಸಂಬಂಧಿಸಿದಂತೆ ವರದಿಯನ್ನು ಸ್ಪಷ್ಟವಾಗಿ ಸಭೆಗೆ ನೀಡಬೇಕು, ಜಲ ಜೀವನ ಮಿಷನ್ ಯೋಜನೆ ಅನೇಕ ಕಡೆಗಳಲ್ಲಿ ಅಪೂರ್ಣವಾಗಿದೆ.

ಪೈಪ್ ಲೈನ್ ಗೆ ಸಂಬಂಧಿಸಿದಂತೆ ಸಿಸಿ ರಸ್ತೆಗಳನ್ನು ಅಗೆದು ಸರಿಯಾಗಿ ಪ್ಯಾಚ್ ವರ್ಕ್ ಮಾಡುತ್ತಿಲ್ಲ.

ಸರಿಯಾಗಿಕೆಲಸಮಾಡದಗುತ್ತಿಗೆದಾರರನ್ನು ಬ್ಲಾಕ್ ಲಿಸ್ಟ್ ಗೆ ಹಾಕಿ ಎಂದು ಮಾನ್ಯ ಶಾಸಕರು ಸೂಚಿಸಿದರು.

ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ತಲುಪುವ ಹಾಗೆ ಕಾರ್ಯನಿರ್ವಹಿಸಬೇಕು, ಮಳೆಗಾಲ ಪ್ರಾರಂಭ ವಾಗಿರುವುದ್ದರಿಂದ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆ ಸಮರ್ಪಕವಾಗಿ ನಿರ್ವಹಿಸಬೇಕು, ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸುವುದು, ನೈರ್ಮಲ್ಯಕ್ಕೆ ಹೆಚ್ಚಿನ ಮಹತ್ವ ನೀಡಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಕ್ರಮ ವಹಿಸುವುದು ಸೇರಿದಂತೆ ಸಭೆಯಲ್ಲಿ ಚರ್ಚೆ ನಡೆಸಿದರು .

ಎಲ್ಲಾ ಇಲಾಖೆಗಳು ನಿಗದಿತ ಅವಧಿಯೊಳಗೆ ನಿಗದಿಪಡಿಸಿದ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸಲು ಮಾನ್ಯ ಶಾಸಕರು ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಲಹೆ ಸೂಚನೆಗಳನ್ನು ನೀಡಿದರು. ಸಭೆಗೆ ಗೈರಾದ ಇಲಾಖೆ ಗಳ ಅಧಿಕಾರಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ತಾಲೂಕು ಪಂಚಾಯಿತಿಯ ನಾಮ ನಿರ್ದೇಶಿತ ಸದಸ್ಯರು ಶ್ರೀ ಪರಸಪ್ಪ, ಶ್ರೀ ಬುಡೇನ್ ಸಾಬ್, ಶ್ರೀಮತಿ ದೀಪಾ, ಶ್ರೀ ಎಸ್.ಕೊಡದಪ್ಪ, ಶ್ರೀ ಗಂಗಾಧರ, ಶ್ರೀ ಎ.ಎಂ.ಹಾಲಯ್ಯ, ಮಾನ್ಯ ಸಹಾಯಕ ನಿರ್ದೇಶಕರು (ಗ್ರಾಉ) ಶ್ರೀ ಹೆಚ್.ವಿಜಯಕುಮಾರ್, ತಾಪಂ ವ್ಯವಸ್ಥಾಪಕರು ಶ್ರೀಮತಿ ಪುಷ್ಪಲತಾ, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಸಿಬ್ಬಂಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಹಿಂದೂಗಳ ಸಂಖ್ಯೆ ಕಡಿಮೆಯಾಗುತ್ತಿದೆ: ಹಿಂದೂ ಸುರಕ್ಷತಾ ಅಭಿಯಾನ ಆರಂಭ

**ಬಾಗಲಕೋಟೆ :** ಹಿಂದೂ ಜನಸಂಖ್ಯೆ ನಿರಂತರವಾಗಿ ಕುಸಿತವಾಗುತ್ತಿದೆ. ಈ ಪಾಶ್ವಭೂಮಿಯಲ್ಲಿ ಹಿಂದೂ ಸುರಕ್ಷತಾಅಭಿಯಾನಆರಂಭಿಸಲು ನಾವು ನಿರ್ಧರಿಸಿದ್ದೇವೆ," ಎಂದು ಅಂತರಾಷ್ಟ್ರೀಯ ಹಿಂದೂ ಪರಿಷತ್ನ ಸಂಸ್ಥಾಪಕ ಅಧ್ಯಕ್ಷ ಪ್ರವೀಣಭಾಯಿ ತೊಗಾಡಿಯಾ ತಿಳಿಸಿದ್ದಾರೆ. ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1947ರಲ್ಲಿ ದೇಶದಲ್ಲಿ ಹಿಂದೂಗಳ ಶೇಕಡಾ 86 ಜನಸಂಖ್ಯೆ ಇತ್ತು. ಮುಸ್ಲಿಮರು ಶೇಕಡಾ 6ರಷ್ಟಿದ್ದರು. ಇದೀಗ ಹಿಂದೂಗಳ ಸಂಖ್ಯೆ ಶೇಕಡಾ 78ರಷ್ಟಕ್ಕೆ ಇಳಿದಿದೆ. ಮುಸ್ಲಿಂ ಜನಸಂಖ್ಯೆ ಶೇಕಡಾ 15ಕ್ಕೆ ಏರಿಕೆಯಾಗಿದೆ, ಎಂದು ವಿವರಿಸಿದರು. ಇತ್ತೀಚೆಗೆ ಬಿಡುಗಡೆಯಾದಅಂತರಾಷ್ಟ್ರೀಯ ವರದಿಯ ಪ್ರಕಾರ, ಭಾರತದಲ್ಲಿ ಒಟ್ಟು ಸಂತಾನೋತ್ಪತ್ತಿ ಪ್ರಮಾಣ 1.9ರಷ್ಟಿದೆ. ಇದು 2.1ಕ್ಕಿಂತ ಕಡಿಮೆ ಇರುವುದರಿಂದ ಭವಿಷ್ಯದಲ್ಲಿ ಜನಸಂಖ್ಯೆ ಕುಸಿಯುವ ಸಂಭವವಿದೆ. ಹಿಂದೂಗಳ ಸಂತಾನೋತ್ಪತ್ತಿ ಪ್ರಮಾಣ 1.7ರಷ್ಟಿದ್ದು, ಮುಸ್ಲಿಮರದ್ದು



2.4ರಷ್ಟಿದೆ, ಎಂದು ಅವರು ಮಾಹಿತಿಯನ್ನ ನೀಡಿದರು. 114 ಕೋಟಿ ಹಿಂದೂ ಜನಸಂಖ್ಯೆ ಬರುವ 65 ವರ್ಷಗಳಲ್ಲಿ 50 ಕೋಟಿ ಆಗಬಹುದು ಎಂಬ ಆತಂಕವನ್ನು ತೊಗಾಡಿಯಾ ವ್ಯಕ್ತಪಡಿಸಿದರು.

ಮೂರು ಪ್ರಮುಖ ಬೇಡಿಕೆಗಳು – ಹಿಂದೂ ಸುರಕ್ಷತಾ ಅಭಿಯಾನದ ಭಾಗವಾಗಿ ಜನಸಂಖ್ಯಾ ನಿಯಂತ್ರಣ ಕಾಯ್ದೆ ಜಾರಿಗೆ ತರಬೇಕು.ಬಾಂಗ್ಲಾದೇಶದಿಂದ ನುಸುಳಿಕೊಂಡಿರುವ ಆಕ್ರಮಣ–ಕಾರರನ್ನು ಹೊರಹಾಕಬೇಕು. 'ತೀನ್ ಬಚ್ಚೆ – ಹಿಂದೂ ಸಚ್ಚೆ, ದೋ ಬಚ್ಚೆ – ಹಿಂದೂ ಕಚ್ಚೆ' ಎಂಬ ಘೋಷಣೆಯೊಂದಿಗೆ ಮೂರನೇ ಮಗುವಿಗೆ ಶೈಕ್ಷಣಿಕ ಸೌಲಭ್ಯ ನೀಡಲಾಗುವುದು.

ಭವಿಷ್ಯದಲ್ಲಿ ಕೇವಲ ಹಿಂದೂಗಳ ಜೊತೆಗೆ ವ್ಯವಹಾರ ನಡೆಸುವ ಉದ್ದೇಶವಿದೆ. ಇದು ಹಿಂದೂಗಳ ಬ್ರಹ್ಮೋಸ್ ಮಿಸ್ಸೈಲ್ ಆಗಿದೆ, ಎಂದೂ ತೊಗಾಡಿಯಾ ತಿಳಿಸಿದರು.

ಅಂತಾರಾಷ್ಟ್ರೀಯ ಹಿಂದೂ ಪರಿಷತ್ ಸ್ಥಾಪನೆಯ ದಿನವಾದ ಜೂನ್ 24ರಿಂದ ಈ ಅಭಿಯಾನ ಆರಂಭವಾಗಲಿದೆ.ಪ್ರತೀ ಶನಿವಾರ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮಗಳು ನಡೆಯಲಿವೆ. ಪಾಕಿಸ್ತಾನ ಒಳಭಾಗ ಪ್ರವೇಶಿಸಿ ಭಾರತೀಯ ಸೇನೆ ನಡೆಸಿದ ಕಾರ್ಯಾಚರಣೆಗೆ ಅಭಿನಂದನೆ ಸಲ್ಲಿಸಿದ ಅವರು, ಇದು ನಾಲ್ಕು ದಿನ ಇನ್ನಷ್ಟು ಮುಂದುವರಿದಿದ್ದರೆ ಪಾಕಿಸ್ತಾನ ವೆಂಟಿಲೇಟರ್ನಲ್ಲಿ ರುವಂತಾಗುತ್ತಿತ್ತು ಎಂದು ಕಟುವಾಗಿ ಟೀಕಿಸಿದರು.

1947ರಿಂದ ದೇಶದ ಆರ್ಥಿಕ ಸ್ಥಿತಿ ಅಭಿವೃದ್ಧಿಯಾಗುತ್ತಿರುವಂತೆ ತೋರುತ್ತಿದ್ದರೂ, ಬಡವರು ಇನ್ನೂ ಬಡವರಾಗಿದ್ದಾರೆ. ಶಿಕ್ಷಣ ದುಬಾರಿ ಆಗಿದ್ದು, ಡಾಕ್ಟರ್ ಆಗುವುದು ಬಡ ಮಕ್ಕಳಿಗೆ ಕನಸಾಗಿದೆ. ನಾನು ಎಂ.ಬಿ.ಬಿ. ಎಸ್ ಓದುವಾಗ 25 ರೂಪಾಯಿ ಫೀಸ್ ಕೊಟ್ಟಿದ್ದೆ. ಆದರೆ ಈಗ ಕೆ.ಜಿ. ವಿದ್ಯಾರ್ಥಿಗಳಿಗೂ ಅಷ್ಟು ಹಣ ಬೇಕು," ಎಂದು ತೊಗಾಡಿಯಾ ಬೇಸರ ವ್ಯಕ್ತಪಡಿಸಿದರು. ಈಗ ನಾನು ವೈದ್ಯರಾಗಲು ಹೊರಟ–ರೂ, ಸೀಟ್ ಸಿಗುವುದಿಲ್ಲ" ಎಂದರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಂದ ಹೊಸ ಹಿಂದೂ ಸಂಘಟನೆ ಆರಂಭದ ಕುರಿತು ಪ್ರತಿಕ್ರಿಯಿಸಿದ ತೊಗಾಡಿಯಾ, "ನದಿಯಲ್ಲಿ ನೀರು ತುಂಬಿದರೆ ಊರಲ್ಲಿ ಹ–ರಿದಂತೆ ಹೊಸ ಸಂಘಟನೆಗಳು ಹುಟ್ಟುವುದು ಸಹಜ.

ಯಾವುದೇ ಹಿಂದೂ ಸಂಘಟನೆಗಳನ್ನು ನಾವು ವಿರೋಧಿಸುವುದಿಲ್ಲ. ಎಲ್ಲ ಹಿಂದೂ ಸಂಘಟನೆಗಳನ್ನೂ ನಾವು ಅಪ್ಪಿಕೊಳ್ಳುತ್ತೇವೆ," ಎಂದು ಸ್ಪಷ್ಟಪಡಿಸಿದರು. ನಾನು ಯಾವುದೇ ರಾಜಕೀಯ ಪಕ್ಷ ನೋಡೋದಿಲ್ಲ, ಕೇವಲ ಹಿಂದೂತ್ವವೇ ನನ್ನ ದೃಷ್ಟಿಕೋಣ" ಎಂದ ಅವರು, ಎಲ್ಲ ಹಿಂದೂಗಳು ತಮ್ಮ ಹೃದಯದ ತುಂಡುಗಳು ಎಂಬ ಭಾವನೆಯನ್ನು ವ್ಯಕ್ತಪಡಿಸಿದರು.

## ಪ್ರತಿಯೊಬ್ಬ ಮನುಷ್ಯನಿಗೆ ಆರೋಗ್ಯ ಬಹುಮುಖ್ಯ ನಾವುಗಳು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕು

## ಪಟ್ಟಣ ಪಂಚಾಯತಿ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ

**ಕೂಡ್ಲಿಗಿ :** ಉತ್ತಮ ಆರೋಗ್ಯಕ್ಕಾಗಿ ಫೂಟ್ ಥೆರಪಿ ಚಿಕಿತ್ಸೆ ಮೂಲಕ ಆರೋಗ್ಯದ ಲಾಭ ಪಡೆಯಬೇಕು ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು. ಪಟ್ಟಣದ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಬುಧವಾರ ಆರ್ಯ ವೈಶ್ಯ ಸಂಘ, ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನ ಸಮಿತಿ, ಮುಕ್ತಿಧಾಮ ಸೇವಾ ಸಮಿತಿ ಹಾಗೂ ಹೊಸಪೇಟೆಯ ಕಂಪಾನಿಯೋ ಸಂಸ್ಥೆ ಏರ್ಪಡಿಸಿದ್ದ 13 ದಿನಗಳ ಉಚಿತ ಫೂಟ್ ಥೆರಪಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.



ಪ್ರಸ್ತುತ ದಿನಗಳಲ್ಲಿ ಬಹುತೇಕರು ನಾನಾ ಖಾಯಿಲೆಯಿಂದ ಬಳಲುತ್ತಿರುವುದನ್ನು ನಾವು ನಿತ್ಯವು ಕಾಣುತ್ತೇವೆ. ಇಂತಹ ಚಿಕಿತ್ಸೆಗಳ ಮೂಲಕ ಆರೋಗ್ಯವನ್ನು ಸುಧಾರಿಸಿಕೊಳ್ಳಬಹುದು ಎಂದು ತಿಳಿಸಿದ ಅವರೂ, 13 ದಿನಗಳ ಕಾಲ ಉಚಿತವಾಗಿ ನೀಡುತ್ತಿದ್ದು, ನಿಮ್ಮ ನೆರೆವರೆಯವರಿಗೂ ಇದರ ಬಗ್ಗೆ ತಿಳಿಸಿ ಅವರ ಆರೋಗ್ಯ ಸುಧಾರಣೆಗೆ ಸಹಕರಿಸುವಂತೆ ತಿಳಿಸಿದರು.

ಫೂಟ್ ಥೆರಪಿ ತರಬೇತಿದಾರ ರಘುನಾಥ ಮಾತನಾಡಿ, ರಕ್ತದೊತ್ತಡ, ಮಧುಮೇಹ, ವೆರಿಕೋಸ್ ವೇನ್, ಸಂಧಿವಾತ ಸೇರಿದಂತೆ ಅನೇಕ ರೋಗಗಳಿಗೆ ಈ ಫೂಟ್ ಥೆರಪಿ ಚಿಕಿತ್ಸೆ ವರದಾನವಾಗಿದ್ದು ಲಕ್ಷಾಂತರ ಜನರು ಇದರ ಲಾಭ ಪಡೆದು ಗುಣಮುಖತರಾಗಿದ್ದಾರೆ.

ಪಾದಗಳಿಗೆವಿದ್ಯುತ್‌ಯಂತ್ರಗಳಸಹಾಯದಿಂದಚಿಕಿತ್ಸೆ ನೀಡಿ ದೇಹದಲ್ಲಿನ ರಕ್ತ ಚಲನೆಯನ್ನು ಕ್ರಮಬದ್ದವಾಗಿ ಚಲಿಸುವಂತೆ ಮಾಡಿ ಎಲ್ಲಾ ಅಂಗಗಳಿಗೂ ರಕ್ತ ಸಂಚಾರವನ್ನು ಈ ಥೆರಪಿ ಮೂಲಕ ಕ್ರಮಬದ್ಧವಾಗಿ ಚಲಿಸುವಂತೆ ಮಾಡಲಾಗುವುದು ಇದರಿಂದಾಗಿ ಅನೇಕರು ವಾಸಿಯಾಗಿ ಆರೋಗ್ಯವಾಗಿದ್ದಾರೆ ಎಂದು ತಿಳಿಸಿದರು.

ವಾಸವಿ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷ ಬಿ.ಆರ್.ಶ್ರೀನಿವಾಸ್ ಶೆಟ್ಟಿ, ಬಂಡ್ರಿ ವೆಂಕಣ್ಣ ಶೆಟ್ಟಿ, ಮುಕ್ತಿಧಾಮ ಸೇವಾ ಸಮಿತಿ ಅಧ್ಯಕ್ಷ ಬಿ.ಎಸ್.ಆನಂದ ಬಾಬು, ಗೌರವಾಧ್ಯಕ್ಷ ಎಸ್.ವಿರುಪಾಕ್ಷ ಮೂರ್ತಿ, ಕಾರ್ಯದರ್ಶಿ ಜಿ.ವೇಣುಗೋಪಾಲ, ಪಪಂ ಸದಸ ತಳಾಸ್ ವೆಂಕಟೇಶ, ಬಂಡ್ರಿ ವಿಜಯಕುಮಾರ್, ಗಂಗಾಧರ ಶೆಟ್ಟಿ, ಬಂಡ್ರಿ ನವೀನ ಶೆಟ್ಟಿ, ಬಿ.ವಿನಾಯಕ ಶೆಟ್ಟಿ, ಎಲ್.ರಾಘವೇಂದ್ರ ಶೆಟ್ಟಿ, ಆರ್.ರಾಘವೇಂದ್ರ ಶೆಟ್ಟಿ,ರಾಮಸ್ವಾಮಿ ಶೆಟ್ಟಿ,ರಾಮು ಕಾಟ್ವಾ,ಬಿ.ನಾಗರಾಜ ಸೇರಿದಂತೆ ಅನೇಕರು ಇದ್ದರು.

# ಬಿರುಗಾಳಿ ಮಳೆಗೆ ಹಾರಿ ಹೋದ ತಗಡಿನ ಶೆಡ್‌ಗಳು



**ಜಮಖಂಡಿ :** ತಾಲೂಕಿನಲ್ಲಿ ಶನಿವಾರ ಮತ್ತು ರವಿವಾರ ಸುರಿದ ಭಾರಿ ಬಿರುಗಾಳಿ ಸಹಿತ ಸುರಿದ ಮಳೆಗೆ ತೋಟಗಳಲ್ಲಿ ಅಳವಡಿಸಲಾಗಿದ್ದ ತಗಡಿನ ಶೆಡಗಳು ಹಾರಿಹೋಗಿವೆ. ಸತತ ಎರಡು ದಿನದಿಂದ ಭಾರೀ ಬಿರುಗಾಳಿ, ಮಳೆಯಾಗಿದ್ದು ರೈತರಿಗೆ ಸಾಕಷ್ಟು ಹಾನಿವುಂಟು ಮಾಡಿದೆ.

ತಾಲೂಕಿನ ಅಡಿಹುಡಿ ಗ್ರಾಮದ ರೈತ ರಾಮಲಿಂಗಪ್ಪ ಶೆಟ್ಟೆಣ್ಣವರ ಎಂಬುವರ ತೋಟದಲ್ಲಿ ನಿರ್ಮಿಸಿದ್ದ ದನಗಳ ಶೆಡ್ ಬಿರುಗಾಳಿಗೆ ಹಾರಿ ಹೋಗಿದೆ.

ಅಂದಾಜು ಐದು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಶೆಡ್ ಗಳು ಹಾರಿ ಹೋಗಿದ್ದರಿಂದ ರೈತರು ಕಂಗಾಲಾಗಿದ್ದಾರೆ. ತಾಲೂಕಿನಾದ್ಯಂತ ಭಾರಿ ಪ್ರಮಾಣದ ಬಿರುಗಾಳಿಗೆ ಅಪಾರ ಪ್ರಮಾಣದಲ್ಲಿ ಹಾನಿಯಾಗಿರುವ ವರದಿ ಸಂಗ್ರಹಿಸುತ್ತಿದ್ದು, ದ್ರಾಕ್ಷಿ ಸಹಿತ ಅನೇಕ ಬೆಳೆಗಳು ಬಿರುಗಾಳಿಯಿಂದಾಗಿ ಹಾನಿಯಾಗಿದೆ.

ನಗರದ ಹೊರವಲಯ ಹಾಗೂ ತೋಟಗಳಲ್ಲಿ ನಿರ್ಮಿಸಿದ ಶೆಡಗಳು ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗಿದೆ. ಸರ್ಕಾರರೈತರಿಗೆಪರಿಹಾರನೀಡುವಂತೆ ರೈತ ಸಂಘಟನೆಗಳು ಒತ್ತಾಯಿಸುತ್ತಿವೆ.

## ಪಟ್ಟಣ ಪಂಚಾಯಿತಿ ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ

**ಕೊಟ್ಟೂರು :** ಕೊಟ್ಟೂರು ಪಟ್ಟಣ ಪಂಚಾಯಿತಿಯ ಪೌರ ಕಾರ್ಮಿಕರಿಗೆ ಪಟ್ಟಣ ಪಂಚಾಯಿತಿ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ಬುಧವಾರ ಕೈಗೊಳ್ಳಲಾಯಿತು. ಆರೋಗ್ಯ ಇಲಾಖೆಯ ವೈದ್ಯರಾದ ಮಂಜುನಾಥ್ ರವರು ಪೌರ ಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಿದರು. ಮುಖ್ಯಾಧಿಕಾರಿಗಳಾದ ನಸುರುಲ್ಲಾ ಮಾತನಾಡಿ, ಪೌರ ಕಾರ್ಮಿಕರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಪಟ್ಟಣದ ಸ್ವಚ್ಛತಾ ಕಾರ್ಯವನ್ನು ಮಾಡುವುದರಿಂದ ಕಾರ್ಮಿಕರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆಯ ಅಗತ್ಯವಿರುತ್ತದೆ. ಆದ್ದರಿಂದ



ಎಲ್ಲಾ ಪೌರಕಾರ್ಮಿಕರು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದರು. ವೈದ್ಯರಾದ ಮಂಜುನಾಥ್ ರವರು ಎಲ್ಲಾ ಪೌರ ಕಾರ್ಮಿಕರ ಆರೋಗ್ಯ ತಪಾಸಣೆ ಮಾಡಿದರು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗ, ಪಟ್ಟಣ ಪಂಚಾಯಿತಿಯ ಸಿಬ್ಬಂದಿ ಹಾಜರಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State